ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

ಮಾಸಪತ್ರಿಕೆ

# JSS VARTHAPATHRA

Monthly Magazine

ಸಂಪುಟ 11 ಸಂಚಿಕೆ 9 ಸೆಪ್ಟೆಂಬರ್ 2026




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೇ ಜಯಂತಿ ಮಹೋತ್ಸವವನ್ನು ಸುತ್ತೂರು ಮತ್ತು ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಶ್ರೀ ಡಿ. ರವಿಶಂಕರ್, ಶ್ರೀ ಸಿ. ಪುಟ್ಟರಂಗಶೆಟ್ಟಿ, ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ತನ್ವೀರ್ ಸೇಠ್, ಶ್ರೀ ಸಿದ್ದರಾಮಯ್ಯ, ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮಿಗಳು, ಶ್ರೀ ನಿಶ್ಚಲಾನಂದನಾಥ ಸ್ವಾಮಿಗಳು, ಶ್ರೀ ಎ.ಆರ್. ಕೃಷ್ಣಮೂರ್ತಿಯವರುಗಳಿದ್ದಾರೆ. (29 ಆಗಸ್ಟ್ 2026)




ರಾಜೇಂದ್ರ ಶ್ರೀಗಳವರ 111ನೇ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠದ ವಿವಿಧ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ 179 ಜನರಿಗೆ ಪರಮಪೂಜ್ಯ ಜಗದ್ಗುರುಗಳವರು ಅಭಿನಂದಿಸಿ ಆಶೀರ್ವದಿಸಿದರು. (29 ಆಗಸ್ಟ್ 2026)




ರಾಜೇಂದ್ರ ಶ್ರೀಗಳವರ 111ನೇ ಜಯಂತಿ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಪ್ರಸಾದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಶ್ರೀ ಎ.ಎಸ್. ಚನ್ನಬಸಪ್ಪ, ಶ್ರೀ ರಘು, ಶ್ರೀ ಎಲ್. ರೇವಣಸಿದ್ಧಯ್ಯ, ಶ್ರೀ ಎಂ. ನಂಜುಂಡಪ್ಪ ಹಾಗೂ ಡಾ. ಸಿ.ಜಿ. ಬೆಟಸೂರಮಠರವರುಗಳಿದ್ದಾರೆ. (29 ಆಗಸ್ಟ್ 2026)

## ರಾಜೇಂದ್ರ ಶ್ರೀಗಳು ಶಿಕ್ಷಣ ಕ್ಷೇತ್ರದ ಕ್ರಾಂತಿಪುರುಷರು– ಶ್ರೀ ಡಿ.ಕೆ. ಶಿವಕುಮಾರ್




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಸುತ್ತೂರು ಮತ್ತು ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೇ ಜಯಂತಿ ಮಹೋತ್ಸವದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಮಾತನಾಡುತ್ತಿರುವುದು. (29 ಆಗಸ್ಟ್ 2026)

"ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರವಾದ ಕ್ರಾಂತಿಯನ್ನು ಮಾಡಿದವರು ಪರಮಪೂಜ್ಯ ರಾಜೇಂದ್ರ ಶ್ರೀಗಳು" ಎಂದು ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್‌ರವರು ಹೇಳಿದರು.

ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ದಿನಾಂಕ 29.8.2026 ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೇ ಜಯಂತಿ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಿ ಅವರು ಮಾತನಾಡುತ್ತಾ ತಿಳಿಸಿದರು. ಪೂಜ್ಯರು ಅತ್ಯಂತ ಚಿಕ್ಕ ವಯಸ್ಸಿನಿಂದಲೇ ಸೇವಾಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಅವರು ಕೈಗೊಂಡ ಕಾರ್ಯಗಳಿಂದ ಅನೇಕ ಜನರ ಕಷ್ಟಗಳು ದೂರವಾಗಿವೆ. ಬಹಳ ಹಿಂದಿನಿಂದಲೂ ಮಠಮಾನ್ಯಗಳು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿರುವುದು ನಾಡಿಗೆ ಶಕ್ತಿ ತುಂಬಿದೆ. ವಿದ್ಯೆಯಿದ್ದರೆ ವಿನಯವಿರುತ್ತದೆ. ದ್ವೇಷ–ಅಸೂಯೆಗಳನ್ನು ಬಿಟ್ಟು ಜೀವನ ಸಾಗಿಸಬೇಕು. ಜೀವನದಲ್ಲಿ ಉತ್ತಮ ಮಾರ್ಗದರ್ಶನಕ್ಕಾಗಿ ಗುರುವಿನ ಆಶೀರ್ವಾದವಿರಬೇಕು. ಶ್ರೀಗಳ ಜಯಂತಿಯನ್ನು ಸ್ಮರಣೀಯವಾಗಿಸಲು ಅನೇಕ ಸಾಮಾಜಿಕ ಕಾರ್ಯಗಳನ್ನು ಪೂಜ್ಯ ಸುತ್ತೂರು ಶ್ರೀಗಳು ಹಮ್ಮಿಕೊಂಡಿದ್ದಾರೆ. ಅತ್ಯಂತ ಅರ್ಥಪೂರ್ಣವಾಗಿ ಜಯಂತಿಯನ್ನು ಆಚರಿಸುತ್ತಿರುವುದು ಶ್ಲಾಘನೀಯವಾಗಿದೆ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು, ರಾಜೇಂದ್ರ ಶ್ರೀಗಳು ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ಶ್ರೀಮಠದ ಕರ್ಣಧಾರತ್ವವನ್ನು ವಹಿಸಿಕೊಂಡರು. ಅವರು

ವಿದ್ಯಾಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲಿ ಕಷ್ಟದಲ್ಲಿದ್ದ ಅನೇಕ ವಿದ್ಯಾರ್ಥಿಗಳಿಗೆ ಆಶ್ರಯ ನೀಡಿದ್ದರು. ಶ್ರೀಗಳು ಕೈಗೊಂಡ ಸೇವಾಕಾರ್ಯಗಳಿಂದ ಅನೇಕರು ಇಂದು ಶಿಕ್ಷಣ ವಂಚಿತರಾಗುವುದು ತಪ್ಪಿತು. ಬಸವಣ್ಣನವರ ಸಮಸಮಾಜ ನಿರ್ಮಾಣದ ಆಶಯಕ್ಕೆ ಪೂರಕವಾಗಿ ರಾಜೇಂದ್ರ ಶ್ರೀಗಳು ಸೇವೆ ಸಲ್ಲಿಸಿದರು. ಕಲೆ, ಸಾಹಿತ್ಯ, ಸಂಗೀತ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೂ ಮಹತ್ವವನ್ನು ನೀಡಿದ್ದರು ಎಂದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು, ಸಮಾಜದಲ್ಲಿ ಶಾಂತಿ, ಸೌಹಾರ್ದ, ಸಾಮರಸ್ಯ ಸ್ಥಾಪನೆಗೆ ಕಾರಣವಾದ ಪವಿತ್ರ ಪರಂಪರೆಯುಳ್ಳ ಮಠವಿದು. ವಚನಕಾರರಾದ ಶ್ರೀ ಘನಲಿಂಗ ಶಿವಯೋಗಿಗಳು, ಶ್ರೀ ಮಂತ್ರಮಹರ್ಷಿಗಳಂತಹ ಪೂಜ್ಯರನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದೆ. ಅಕ್ಷರ ಕ್ರಾಂತಿಯನ್ನು ಮಾಡಿದ ರಾಜೇಂದ್ರ ಶ್ರೀಗಳು ನಾಡಿನ ಉದ್ದಗಲಕ್ಕೂ ಮಠದ ಸೇವಾ ಕಾರ್ಯಗಳನ್ನು ಎಲ್ಲ ಕ್ಷೇತ್ರಕ್ಕೂ ವಿಸ್ತರಿಸಿದರು. ಅವರು ಮಾತ್ರ ಉದ್ಧಾರವಾಗದೇ, ಎಲ್ಲರ ಬದುಕನ್ನು ಉದ್ಧಾರವಾಗಿಸಿದರು. ಬಹಳ ಕಷ್ಟಕಾಲದಲ್ಲಿ ಪ್ರಸಾದನಿಲಯಗಳನ್ನು ತೆರೆದರು. ಅನೇಕ ಕಷ್ಟದ ಸಂದರ್ಭಗಳಲ್ಲಿಯೂ ತ್ಯಾಗದಿಂದ ಪ್ರಸಾದನಿಲಯಗಳನ್ನು ಮುನ್ನಡೆಸಿದ್ದಾರೆ. ರಾಜೇಂದ್ರ ಶ್ರೀಗಳು ಈ ಭಾಗದ ಜನರಿಗೆ ದಾರಿದೀಪವಾದವರು. ಅವರು ಉಪಮಾತೀತರು. ಅವರ ಕಾರ್ಯವನ್ನು ಸಹಸ್ರಪಟ್ಟು ಹೆಚ್ಚಿಸಿದವರು ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು. ಸುತ್ತೂರು ಮತ್ತು ಸಿದ್ಧಗಂಗಾ ಶ್ರೀಮಠಗಳ ಮಧ್ಯೆ ಅವಿನಾಭಾವ ಸೋದರ ಸಂಬಂಧವಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ವಿಜ್ಞಾನ ವಾಹಿನಿಗೆ ಚಾಲನೆ ನೀಡಿದ ಉಪಮುಖ್ಯಮಂತ್ರಿಗಳಾದ ಡಾ. ಜಿ. ಪರಮೇಶ್ವರರವರು, ರಾಜೇಂದ್ರ ಶ್ರೀಗಳು ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ನಿಸ್ವಾರ್ಥ ಮನೋಭಾವವನ್ನು ಹೊಂದಿದ್ದರು. ಇನ್ನೊಬ್ಬರ ಕಷ್ಟಕ್ಕೆ ಸಹಾಯ ಮಾಡುವ ವ್ಯಕ್ತಿತ್ವ ಅವರದಾಗಿತ್ತು. ರಾಜೇಂದ್ರ ಶ್ರೀಗಳು ದೂರದೃಷ್ಟಿ ಹೊಂದಿದ್ದ ಸಂತರಾಗಿದ್ದರು. ಅವರು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದರು. ಇದು ಸಮಾಜ ಪರಿವರ್ತನೆಯಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸಿತು. ಅಂದು ರಾಜೇಂದ್ರ ಶ್ರೀಗಳು ಹಾಕಿದ ಅಡಿಪಾಯದ ಫಲವಾಗಿ ಇಂದು 370ಕ್ಕೂ ಹೆಚ್ಚು ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವುದು ಸಾಮಾನ್ಯ ಸಂಗತಿಯಲ್ಲ. ಸರ್ಕಾರವೇ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ. ಅದು ಮಾಡಲಾಗದ ಕೆಲಸಗಳನ್ನು ಸುತ್ತೂರು ಶ್ರೀಮಠದಂತಹ ಧಾರ್ಮಿಕ ಸಂಸ್ಥೆಗಳು ನಿರ್ವಹಿಸುತ್ತಿವೆ ಎಂದು ಹೇಳಿದರು.

ಶ್ರೀ ಅವಧೂತ ದತ್ತಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಮಹಾಸ್ವಾಮಿಗಳು ಇದೊಂದು ಅಪೂರ್ವವಾದ ಗುರುಭಕ್ತಿಯ ಸಿಂಚನದ ಕಾರ್ಯಕ್ರಮ. ಗುರುವಿನಲ್ಲಿ ಭಕ್ತಿಯಿದ್ದರೆ ಎಂದಿಗೂ ಅಪಜಯವಿರುವುದಿಲ್ಲ. ಪೂಜ್ಯ ರಾಜೇಂದ್ರ ಶ್ರೀಗಳ ಜಯಂತಿ ಮೈಸೂರಿಗೆ ಹಬ್ಬವಿದ್ದಂತೆ. ಪೂಜ್ಯರು ಲಕ್ಷಾಂತರ ಜನರ ಕಣ್ಣೀರನ್ನು ಒರೆಸಿದವರು. ಅವರನ್ನು ನೆನೆಯುವುದೇ ಒಂದು ಪುಣ್ಯ ವಿಶೇಷ ಎಂದರು.

ವಿಶ್ವ ಒಕ್ಕಲಿಗರ ಮಠದ ಜಗದ್ಗುರು ಡಾ. ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮಿಗಳು, ನಿಸ್ವಾರ್ಥವಾದ ತ್ಯಾಗ ಮನೋಭಾವನೆಯೊಂದಿಗೆ ರಾಜೇಂದ್ರ ಶ್ರೀಗಳು ಸ್ವಾತಂತ್ರ್ಯಪೂರ್ವದಲ್ಲಿ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳ ಜೀವನವನ್ನು ಹಸನುಗೊಳಿಸಿದ ಮಹಾತ್ಮರು ಎಂದು ಸ್ಮರಿಸಿದರು.

ಇದೇ ಸಂದರ್ಭದಲ್ಲಿ 'ರಾಜೇಂದ್ರ ನುಡಿ ನಮನ' (2ನೇ ಆವೃತ್ತಿ), 'Man with Divinity : Poojya Rajendra Shree', 'ನಮ್ಮೊಡನಿದ್ದ ದೈವ : ಪೂಜ್ಯ ರಾಜೇಂದ್ರ ಶ್ರೀ' ಕೃತಿಗಳನ್ನು, 'ಪ್ರಸಾದ ವಿಶೇಷ ಸಂಚಿಕೆ' ಹಾಗೂ 'ಜೆಎಸ್‌ಎಸ್ ವಾರ್ತಾಪತ್ರ' ವಿಶೇಷ ಸಂಚಿಕೆಯನ್ನು

ಬಿಡುಗಡೆಗೊಳಿಸಲಾಯಿತು.

ಸಚಿವರುಗಳಾದ ಶ್ರೀ ಸಿ. ಪುಟ್ಟರಂಗಶೆಟ್ಟಿಯವರು, ಡಾ. ಯತೀಂದ್ರ ಸಿದ್ದರಾಮಯ್ಯನವರು, ಲೋಕಸಭಾ ಸದಸ್ಯರುಗಳಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು, ಶಾಸಕರುಗಳಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ತನ್ವೀರ್ ಸೇಠ್, ಶ್ರೀ ಎ.ಆರ್. ಕೃಷ್ಣಮೂರ್ತಿ, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ಜಿ.ಡಿ. ಹರೀಶ್‌ಗೌಡರವರುಗಳು ಮಾತನಾಡಿದರು. ಶ್ರೀ ಅಶೋಕ್ ಪಟ್ಟಣ, ಶ್ರೀ ಕೆ. ಹರೀಶ್‌ಗೌಡ, ಶ್ರೀ ದರ್ಶನ್ ಧ್ರುವನಾರಾಯಣ್, ಶ್ರೀ ಡಿ. ರವಿಶಂಕರ್, ಶ್ರೀ ಕೆ. ವಿವೇಕಾನಂದ, ಡಾ. ಡಿ. ತಿಮ್ಮಯ್ಯನವರುಗಳು ಉಪಸ್ಥಿತರಿದ್ದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ಸ್ವಾಗತಿಸಿದರು. ಶ್ರೀ ವೀರಭದ್ರಸ್ವಾಮಿ ವಂದಿಸಿದರು. ಜೆಎಸ್‌ಎಸ್ ಲಲಿತಕಲಾ ತಂಡದವರು ಪ್ರಾರ್ಥಿಸಿದರು. ಶ್ರೀ ಬಿ. ನಿರಂಜನಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಸಂಸ್ಥೆಗಳಲ್ಲಿ ನಿವೃತ್ತರಾದವರಿಗೆ ಅಭಿನಂದನೆ

ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ದಿನಾಂಕ 29.8.2026ರಂದು ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೇ ಜಯಂತಿ ಸಂದರ್ಭದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವಿವಿಧ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ 2025–26ನೇ ಸಾಲಿನಲ್ಲಿ ನಿವೃತ್ತರಾದವರಿಗೆ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ನಿವೃತ್ತರ ಪರಿಚಯದ 'ತೇರನೆಳೆದವರು' ಪುಸ್ತಕವನ್ನು ಬಿಡುಗಡೆಗೊಳಿಸಿ, ಅಭಿನಂದಿಸಿ ಆಶೀರ್ವದಿಸಿದರು.

ಸೇವೆಯ ದಿನಗಳ ಅನುಭವಗಳನ್ನು ಹಂಚಿಕೊಂಡ ಡಾ. ಪುರುಷೋತ್ತಮ ಶಾಸ್ತ್ರೀ ಮತ್ತು ಶ್ರೀ ಕೆ. ಮಹದೇವಸ್ವಾಮಿಯವರುಗಳು ಜೆಎಸ್‌ಎಸ್ ಸಂಸ್ಥೆಯಲ್ಲಿ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿದ್ದು ಸೌಭಾಗ್ಯ. ಇಂದಿನ ನಮ್ಮ ಏಳ್ಗೆಗೆ ಸಂಸ್ಥೆ ಹಾಗೂ ಪೂಜ್ಯರ ಆಶೀರ್ವಾದವೇ ಕಾರಣ. ಇಲ್ಲಿ ಒಂದೇ ಕುಟುಂಬದ ಸದಸ್ಯರ ರೀತಿಯಲ್ಲಿ ಎಲ್ಲ ನೌಕರರನ್ನು ಕಾಣಲಾಗುತ್ತದೆ. ಸೇವೆಯ ಸಂದರ್ಭದಲ್ಲಿ ಸಹೋದ್ಯೋಗಿಗಳು ಮತ್ತು ವಿದ್ಯಾರ್ಥಿಗಳೊಂದಿಗೆ ಕಳೆದ ಕ್ಷಣಗಳು ಜೀವನದಲ್ಲಿ ಸದಾ ಹಸಿರಾಗಿರುತ್ತವೆ. ಜೆಎಸ್‌ಎಸ್ ಸಂಸ್ಥೆ ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಯನ್ನು ಹೊಂದಲಿ ಎಂಬುದೇ ನಮ್ಮೆಲ್ಲರ ಆಶಯ ಎಂದರು.

ಕಾರ್ಯಕ್ರಮದಲ್ಲಿ ಮಹಾವಿದ್ಯಾಪೀಠದ ಸಂಸ್ಥೆಗಳಲ್ಲಿ ಸೇವೆಸಲ್ಲಿಸಿ 2025 ಸೆಪ್ಟೆಂಬರ್‌ನಿಂದ 2026 ಆಗಸ್ಟ್ ಅಂತ್ಯದವರೆಗೆ ನಿವೃತ್ತರಾದವರು ಹಾಗೂ ಸೇವೆಯಿಂದ ಬಿಡುಗಡೆಗೊಂಡವರಿಗೆ ಅಭಿನಂದನೆ ಮತ್ತು ಸೇವೆಯಲ್ಲಿ ಇರುವಾಗಲೇ ಅಗಲಿದವರ ಕುಟುಂಬದವರಿಗೆ ಸಾಂತ್ವನ ಹೇಳಲಾಯಿತು – ಹೀಗೆ ಒಟ್ಟು 179 ನೌಕರರು ಹಾಗೂ ಅವರ ಕುಟುಂಬವರ್ಗದವರನ್ನು ಪೂಜ್ಯರು ಆಶೀರ್ವದಿಸಿ ಅಭಿನಂದಿಸಿದರು.

ಶ್ರೀ ಪಿ. ಶಿವಾನಂದ ಭಾರತಿ ಸ್ವಾಗತಿಸಿದರು. ಡಾ. ಬಿ. ಪ್ರಭುಸ್ವಾಮಿ, ಕು. ಎಚ್.ಎಸ್. ಅಂಬಿಕಾ, ಡಾ. ಪ್ರಿಯದರ್ಶಿನಿ, ಶ್ರೀಮತಿ ಹೆಚ್.ಆರ್. ಮಮತ, ಶ್ರೀ ಆರ್.ಎಸ್. ಕುಮಾರ್, ಶ್ರೀಮತಿ ಡಿ.ಎಸ್. ಅಂಬಿಕಾ, ಶ್ರೀಮತಿ ಕೆ.ಜಿ. ವಿನುತಾ, ಶ್ರೀಮತಿ ಸಿ. ವಾಣಿ, ಶ್ರೀಮತಿ ಹೆಚ್.ಎಸ್. ಮಾನಸ ಹಾಗೂ ಶ್ರೀ ಜಿ. ಶಿವಸ್ವಾಮಿಯವರುಗಳು ನಿವೃತ್ತರುಗಳ ಪರಿಚಯವನ್ನು ಮಾಡಿಕೊಟ್ಟರು. ಕಾನೂನು ಕಾಲೇಜು ವಿದ್ಯಾರ್ಥಿಗಳಾದ ಕು. ಎಸ್. ಲಿಖಿತ ಮತ್ತು ಕು. ವಿನ್ಮಯಿರವರು ಪ್ರಾರ್ಥಿಸಿದರು. ಡಾ. ಎ.ಟಿ. ಜಗದೀಶ್ ವಂದಿಸಿದರು. ಶ್ರೀಮತಿ ಎಂ. ತೇಜಸ್ವಿನಿ ಕಾರ್ಯಕ್ರಮ ನಿರೂಪಿಸಿದರು.

## ಪ್ರಸಾದ ಲೇಖನ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಅಂಗವಾಗಿ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಪ್ರಸಾದ ಲೇಖನ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ದಿನಾಂಕ 29.8.2026ರಂದು ನಡೆದ ರಾಜೇಂದ್ರ ಶ್ರೀಗಳವರ 111ನೇ ಜಯಂತಿ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳ ಕಚೇರಿಯ ಉಪಕಾರ್ಯದರ್ಶಿಗಳಾದ ಶ್ರೀ ರಘುರವರು ಬಹುಮಾನಗಳನ್ನು ವಿತರಿಸಿದರು.

ಪದವಿಪೂರ್ವ ವಿಭಾಗದಲ್ಲಿ ಮೈಸೂರಿನ ವಿಜಯನಗರದ ಸದ್ವಿದ್ಯಾ ಸೆಮಿ-ರೆಸಿಡೆನ್ಸಿಯಲ್ ಪದವಿಪೂರ್ವ ಕಾಲೇಜಿನ ಕು. ಎಲ್. ದೀಕ್ಷಾ ಪ್ರಥಮ, ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಪದವಿಪೂರ್ವ ಕಾಲೇಜಿನ ಕು. ಆರ್. ಇಂಚರ ದ್ವಿತೀಯ, ಯಳಂದೂರಿನ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನ ಕು. ವಿ. ಪ್ರೀತಿ ತೃತೀಯ ಬಹುಮಾನ ಪಡೆದರು.

ಪದವಿ ವಿಭಾಗದಲ್ಲಿ ಮೈಸೂರಿನ ಜ್ಞಾನದೀಪ ಪ್ರಥಮ ದರ್ಜೆ ಕಾಲೇಜಿನ ಕು. ಎಂ. ಜಯಶ್ರೀ ಪ್ರಥಮ, ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕು. ಎಸ್. ಸಂಜನಾ ದ್ವಿತೀಯ, ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕು. ಎಂ. ಮಹಾಲಕ್ಷ್ಮೀ ತೃತೀಯ ಬಹುಮಾನ ಪಡೆದರು.

ಸ್ನಾತಕೋತ್ತರ ವಿಭಾಗದಲ್ಲಿ ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನ ಕು. ಸಿ. ಪ್ರಗತಿ ಪ್ರಥಮ, ಭಗವಾನ್ ಬುದ್ಧ ಶಿಕ್ಷಣ ಮಹಾವಿದ್ಯಾಲಯದ ಕು. ಎಸ್. ಗೀತಾ ದ್ವಿತೀಯ ಹಾಗೂ ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯದ ಶ್ರೀ ಎಚ್.ಎನ್. ರಾಜಶೇಖರ ತೃತೀಯ ಬಹುಮಾನ ಪಡೆದರು. ಶ್ರೀ ಕುಮಾರಸ್ವಾಮಿ ವಿರಕ್ತಮಠ ವಿವರಗಳನ್ನು ಮಂಡಿಸಿದರು.

## ವಾರ್ಷಿಕ ಸಂಚಿಕೆಗಳಿಗೆ ಬಹುಮಾನ ವಿತರಣೆ

ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ದಿನಾಂಕ 29.8.2026ರಂದು ಏರ್ಪಡಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೆಯ ಜಯಂತಿ ಮಹೋತ್ಸವದ ಸಮಾರಂಭದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಉತ್ತಮ ವಾರ್ಷಿಕ ಸಂಚಿಕೆಗಳಿಗೆ ಬಹುಮಾನ ವಿತರಿಸಲಾಯಿತು.

ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜಿನ 'ಜೇಜೀನ್', ಜೆಎಸ್‌ಎಸ್ ಮಹಿಳಾ ಕಾಲೇಜಿನ 'ಸಿಂಧೂರ', ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್‌ನ 'ಉಜ್ವಲ', ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ 'ಸುತ್ತೂರು ಸಿರಿ' ಸಂಚಿಕೆಗಳಿಗೆ ಪ್ರಥಮ ಬಹುಮಾನ, ಕೊಯಮತ್ತೂರಿನ ಊಟಿಯ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ 'ಫಾರ್ಮಸಾಗ', ಜೆಎಸ್‌ಎಸ್ ಪಬ್ಲಿಕ್ ಶಾಲೆಯ 'ಜ್ಞಾನಜ್ಯೋತಿ', ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ 'ಸುವರ್ಣ', ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನ 'ಹೊಂಬಾಳೆ' ಸಂಚಿಕೆಗಳಿಗೆ ದ್ವಿತೀಯ ಬಹುಮಾನ, ಮೈಸೂರಿನ ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜಿನ 'ಪ್ರತಿಬಿಂಬ', ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನ 'ಬಿಂಬ', ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನ 'ಚೈತನ್ಯ', ಶ್ರೀ ಶಿವರಾತ್ರೀಶ್ವರ ನಗರದ ಜೆಎಸ್‌ಎಸ್ ಪ್ರೌಢಶಾಲೆಯ 'ಹೊಂಗಿರಣ' ಸಂಚಿಕೆಗಳಿಗೆ ತೃತೀಯ ಬಹುಮಾನ ವಿತರಿಸಲಾಯಿತು. ಶ್ರೀ ಜಿ.ಎಂ. ಪ್ರಸಾದ್‌ರವರು ವಿವರಗಳನ್ನು ಮಂಡಿಸಿದರು.

## ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರೌಢಶಾಲೆಗಳು, ಪದವಿಪೂರ್ವ ಕಾಲೇಜುಗಳು, ಪಬ್ಲಿಕ್ ಶಾಲೆ ಹಾಗೂ ಜೆಎಸ್‌ಎಸ್ ಕೆಓಎಸ್‌ನಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಮೊದಲ ಮೂವರು ವಿದ್ಯಾರ್ಥಿಗಳಿಗೆ ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ದಿನಾಂಕ 29.8.2026ರಂದು ನೆರವೇರಿದ ರಾಜೇಂದ್ರ ಶ್ರೀಗಳವರ 111ನೇ ಜಯಂತಿ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಎಸ್‌ಎಸ್‌ಎಲ್‌ಸಿಯ ಪ್ರೌಢಶಾಲಾ ವಿಭಾಗದಲ್ಲಿ ಕನ್ನಡ ಮತ್ತು ಆಂಗ್ಲ ಮಾಧ್ಯಮದ ಆರು ವಿದ್ಯಾರ್ಥಿಗಳು, ಪಿಯುಸಿ ಕಲಾ ವಿಭಾಗದ ಆರು, ವಾಣಿಜ್ಯ ವಿಭಾಗದ ನಾಲ್ಕು ಮತ್ತು ವಿಜ್ಞಾನ ವಿಭಾಗದ ನಾಲ್ಕು ವಿದ್ಯಾರ್ಥಿಗಳು, ಪಬ್ಲಿಕ್ ಶಾಲಾ ವಿಭಾಗದ 10ನೇ ತರಗತಿಯ ನಾಲ್ಕು ಹಾಗೂ 12ನೇ ತರಗತಿಯ ಕಲಾ, ವಾಣಿಜ್ಯಶಾಸ್ತ್ರ ಮತ್ತು ವಿಜ್ಞಾನ ವಿಭಾಗದ ಒಂಬತ್ತು ವಿದ್ಯಾರ್ಥಿಗಳು ಹಾಗೂ ಜೆಎಸ್‌ಎಸ್ ಕರ್ನಾಟಕ ಮುಕ್ತ ವಿದ್ಯಾಲಯದ ಎಸ್‌ಎಸ್‌ಎಲ್‌ಸಿಯ ನಾಲ್ಕು ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರ ಸ್ವೀಕರಿಸಿದರು. ಶ್ರೀ ಎಂ. ಶಿವಮಾದಪ್ಪ ವಿವರಗಳನ್ನು ಮಂಡಿಸಿದರು. □

## ಜೆಎಸ್‌ಎಸ್ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ವಿದ್ಯಾರ್ಥಿವೇತನ ನೀಡಿಕೆ




ರಾಜೇಂದ್ರ ಶ್ರೀಗಳವರ 111ನೇ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜೆಎಸ್‌ಎಸ್ ವಿದ್ಯಾರ್ಥಿನಿಲಯಗಳಲ್ಲಿದ್ದು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಜೆಎಸ್‌ಎಸ್ ಪ್ರಸಾದನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು. ಅತಿಥಿಗಳು ಹಾಗೂ ವಿದ್ಯಾರ್ಥಿಗಳಿದ್ದಾರೆ. (29 ಆಗಸ್ಟ್ 2026)

ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ದಿನಾಂಕ 29.8.2026ರಂದು ನಡೆದ ರಾಜೇಂದ್ರ ಶ್ರೀಗಳವರ 111ನೇ ಜಯಂತಿ ಮಹೋತ್ಸವದಲ್ಲಿ, ಜೆಎಸ್‌ಎಸ್ ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹೆಚ್ಚಿನ ಅಂಕ ಗಳಿಸಿ ಆರ್ಥಿಕ ನೆರವು ಅಗತ್ಯವಿರುವ ವಿದ್ಯಾರ್ಥಿಗಳಿಗೆ ಜೆಎಸ್‌ಎಸ್ ಪ್ರಸಾದನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಎಲ್. ರೇವಣಸಿದ್ಧಯ್ಯನವರು 54 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ವಿತರಿಸಿದರು. ಶ್ರೀ ಎಸ್. ಬಸವಣ್ಣ ವಿವರಗಳನ್ನು ಮಂಡಿಸಿದರು.

□

---



ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ನಡೆದ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೇ ಜಯಂತಿ ಮಹೋತ್ಸವದ ಪ್ರಯುಕ್ತ ರಾಜೇಂದ್ರ ಶ್ರೀಗಳವರ ಪುತ್ಥಳಿ ಮೆರವಣಿಗೆಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿನಿಂದ ಹೊರಟ ಸಂದರ್ಭದಲ್ಲಿ ಹರಗುರು ಚರಮೂರ್ತಿಗಳು, ಕಲಾವಿದರು, ಅತಿಥಿಗಣ್ಯರು, ಅಧಿಕಾರಿಗಳು, ಅಧ್ಯಾಪಕ, ಅಧ್ಯಾಪಕೇತರರು ಮತ್ತು ಸಾರ್ವಜನಿಕರಿದ್ದಾರೆ. (29 ಆಗಸ್ಟ್ 2026)

# ಸುತ್ತೂರು ಶ್ರೀಮಠದಿಂದ ಮೃಗಾಲಯಕ್ಕೆ ಕೊಡುಗೆ



ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೆಯ ಜಯಂತಿಯ ಸಂದರ್ಭದಲ್ಲಿ ಶ್ರೀ ಚಾಮರಾಜೇಂದ್ರ ಮೃಗಾಲಯದ ಪ್ರಾಣಿಪಕ್ಷಿಗಳ ಆಹಾರಕ್ಕಾಗಿ ಒಂದು ಲಕ್ಷ ರೂ.ಗಳ ಚೆಕ್ಕನ್ನು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀಮತಿ ಪಿ. ಅನುಷಾರವರಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಕುಮಾರಸ್ವಾಮಿಯವರು ನೀಡಿದರು. ಶ್ರೀ ಬಿ. ನಿರಂಜನಮೂರ್ತಿ, ಪ್ರೊ. ಮೊರಬದ ಮಲ್ಲಿಕಾರ್ಜುನ, ಶ್ರೀ ಲಕ್ಷ್ಮೀಕಾಂತ್, ಶ್ರೀಮತಿ ಎಂ.ಆರ್. ಧನ್ಯಶ್ರೀಯವರುಗಳಿದ್ದಾರೆ. (25.8.2026)

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೆಯ ಜಯಂತಿ ಮಹೋತ್ಸವದ ಅಂಗವಾಗಿ ಶ್ರೀಮಠದಿಂದ ಪ್ರತಿವರ್ಷದಂತೆ ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದ ಪ್ರಾಣಿ-ಪಕ್ಷಿಗಳ ಆಹಾರದ ನಿರ್ವಹಣೆಗಾಗಿ ಒಂದು ಲಕ್ಷ ರೂ.ಗಳ ಚೆಕ್ಕನ್ನು 25.8.2026ರಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀಮತಿ ಪಿ. ಅನುಷಾರವರಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಕುಮಾರಸ್ವಾಮಿಯವರು ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶ್ರೀಮತಿ ಪಿ. ಅನುಷಾರವರು ಪ್ರತಿವರ್ಷವೂ ರಾಜೇಂದ್ರ ಶ್ರೀಗಳ ಜಯಂತಿಯಂದು ಮೃಗಾಲಯದ ಪ್ರಾಣಿಪಕ್ಷಿಗಳ ಆಹಾರ ನಿರ್ವಹಣೆಗಾಗಿ ಕೊಡುಗೆ ನೀಡುತ್ತಿರುವುದು ಮಾದರಿ ಕಾರ್ಯವಾಗಿದೆ. ಇದರಿಂದ ಮೃಗಾಲಯಕ್ಕೆ ಬಹಳ ಅನುಕೂಲವಾಗುತ್ತದೆ. ಇದನ್ನು ಪ್ರಾಣಿ ಮತ್ತು ಪಕ್ಷಿಸಂಕುಲದ ಆಹಾರ ಮತ್ತು ಅವುಗಳ ಪಾಲನೆಗೆ ಬಳಕೆ ಮಾಡಿಕೊಳ್ಳಲಾಗುತ್ತದೆ. ಪರಮಪೂಜ್ಯ ಸುತ್ತೂರು ಶ್ರೀಗಳು ಪ್ರಾಣಿ ಪಕ್ಷಿಗಳ ಮೇಲೆ ಅಪಾರ ಕಾಳಜಿಯನ್ನು ಹೊಂದಿರುವುದನ್ನು ಇದು ಸೂಚಿಸುತ್ತದೆ. ಇದೇ ರೀತಿ ಬೇರೆ ಬೇರೆ ಸಂಘ ಸಂಸ್ಥೆಗಳು ಸಹಾಯಹಸ್ತ ಚಾಚಬೇಕು ಎಂದು ಕೋರಿದರು.

ವಲಯ ಅರಣ್ಯಾಧಿಕಾರಿಗಳಾದ ಶ್ರೀಮತಿ ಎಂ.ಆರ್. ಧನ್ಯಶ್ರೀ, ಉಪನಿರ್ದೇಶಕರಾದ ಶ್ರೀ ಲಕ್ಷ್ಮೀಕಾಂತ್, ಪ್ರೊ. ಮೊರಬದ ಮಲ್ಲಿಕಾರ್ಜುನ, ಶ್ರೀ ಬಿ. ನಿರಂಜನಮೂರ್ತಿ ಹಾಗೂ ಮೃಗಾಲಯದ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

## ಸಂಸ್ಕೃತ ಜಗತ್ತಿನ ಶ್ರೇಷ್ಠ ಭಾಷೆಗಳಲ್ಲಿ ಒಂದು



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಂಸ್ಕೃತೋತ್ಸವವನ್ನು ಉದ್ಘಾಟಿಸಲಾಯಿತು. ಡಾ. ರೇಚಣ್ಣ, ಡಾ. ಬಿ.ಪಿ. ಷಡಕ್ಷರಿ, ಡಾ. ಸಿ. ಶಿವಕುಮಾರಸ್ವಾಮಿ, ಡಾ. ಸಿ. ಶಿವರಾಜು, ಪ್ರೊ. ಕೋಟೆಮನೆ ರಾಮಚಂದ್ರ ಜಿ. ಭಟ್, ಡಾ. ಎಸ್. ಅಹಲ್ಯಾ ಹಾಗೂ ಡಾ. ಬಿ. ನಂಜುಂಡಸ್ವಾಮಿಯವರುಗಳಿದ್ದಾರೆ. (19 ಆಗಸ್ಟ್ 2026)

ಜಗತ್ತಿನ ಶ್ರೇಷ್ಠ ಪ್ರಾಚೀನ ಭಾಷೆಗಳಲ್ಲಿ ಸಂಸ್ಕೃತವೂ ಒಂದು ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 19.8.2026 ರಂದು ಆಯೋಜಿಸಿದ್ದ ಸಂಸ್ಕೃತೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಪೂಜ್ಯರು ಆಶೀರ್ವಚನ ನೀಡಿದರು. ಭಾರತೀಯ ಭಾಷೆಗಳ ಜೊತೆಗೆ ಯುರೋಪಿಯನ್ ಭಾಷೆಗಳಿಗೂ ಸಂಸ್ಕೃತ ತಾಯಿ ಬೇರಾಗಿದೆ. ವ್ಯಾಕರಣ ಶುದ್ಧತೆಯನ್ನು ಸಂಸ್ಕೃತ ಭಾಷೆ ಕಲಿಸುತ್ತದೆ. ಪ್ರಾಚೀನ ಗ್ರಂಥಗಳೆಲ್ಲವೂ ಸಂಸ್ಕೃತದಿಂದ ರಚಿತವಾಗಿವೆ. ಸಂಸ್ಕೃತ ಸಂವಹನ ಭಾಷೆಯಾಗಿದೆ. ತರಗತಿಯಲ್ಲಿ ಮಕ್ಕಳು ಶ್ರದ್ಧೆ ಹಾಗೂ ಆಸಕ್ತಿಯಿಂದ ಸಂಸ್ಕೃತ ಭಾಷೆಯನ್ನು ಕಲಿತು ಶ್ರೇಷ್ಠ ವಿದ್ವಾಂಸರಾಗಲು ಸಾಧ್ಯವಿದೆ ಎಂದು ಹೇಳಿದರು.

ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಸಿ. ಶಿವರಾಜುರವರು, ಜ್ಞಾನದಾಹವನ್ನು ಸಂಸ್ಕೃತ ಭಾಷೆ ನೀಗಿಸಿದೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಜೆಎಸ್‌ಎಸ್ ಸಂಸ್ಥೆ ಸಂಶೋಧನಾ ಕೇಂದ್ರ ತೆರೆದಿರುವುದು ಹೆಮ್ಮೆಯ ಸಂಗತಿ. ಸಂಸ್ಕೃತ ಗ್ರಂಥಭಂಡಾರವನ್ನು ಸಂರಕ್ಷಿಸುವ ಕಾರ್ಯವನ್ನು ಜೆಎಸ್‌ಎಸ್ ಸಂಸ್ಥೆ ಕೈಗೊಂಡಿರುವುದು ಶ್ರೇಷ್ಠ ಕಾರ್ಯವಾಗಿದೆ ಎಂದು ತಿಳಿಸಿದರು.

ಪ್ರೊ. ಕೋಟೆಮನೆ ರಾಮಚಂದ್ರ ಜಿ. ಭಟ್‌ರವರು ಸಂಸ್ಕೃತ ವಿಶ್ವ ಭಾಷೆಯಾಗಿದ್ದು, ಸಮಸ್ತ ಮಾನವ ಕುಲದ

ಮಾತೃಭಾಷೆಯಾಗಿದೆ. ಜಗತ್ತಿನ ಭಾಷೆಗಳಲ್ಲಿ ಸಂಸ್ಕೃತ ಅಗ್ರಮಾನ್ಯತೆಯನ್ನು ಪಡೆದಿದೆ. ಸಂಸ್ಕೃತ ಸಂಸ್ಕಾರಗುಣಸಂಹಿತೆ ಮತ್ತು ಜ್ಞಾನಭಂಡಾರದ ಸತ್ಯವನ್ನು ಹೊಂದಿದೆ. ಈ ಭಾಷೆ ಕಲಿಯುವುದರಿಂದ ಸತ್ಯದ ದರ್ಶನವಾಗುತ್ತದೆ ಎಂದು ತಿಳಿಸಿದರು.

ಸಂಶೋಧಕರು ಮತ್ತು ಆಯುರ್ವೇದ ವೈದ್ಯರಾದ ಡಾ. ಬಿ. ನಂಜುಂಡಸ್ವಾಮಿಯವರು ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ ಮೈಸೂರು ಸಂಸ್ಥಾನ ಸಂಸ್ಕೃತ ಭಾಷೆ ಮತ್ತು ಸಾಹಿತ್ಯಕ್ಕೆ ಗುರುತರವಾದ ಕೊಡುಗೆಯನ್ನು ನೀಡಿದೆ ಎಂದು ತಿಳಿಸಿದರು. ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರಾದ ಡಾ. ಶಿವಕುಮಾರಸ್ವಾಮಿಯವರು ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ ಸುತ್ತೂರು ಮಠವು ಸಂಸ್ಕೃತ ಭಾಷೆ ಮತ್ತು ಸಾಹಿತ್ಯಕ್ಕೆ ತನ್ನದೆ ಕೊಡುಗೆಯನ್ನು ನೀಡಿರುವುದನ್ನು ಸ್ಮರಿಸಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್. ಅಹಲ್ಯಾರವರು, ಶ್ರಾವಣಮಾಸ ಶ್ರೇಷ್ಠವಾಗಿದ್ದು ಈ ಮಾಸದಲ್ಲಿ ಸಂಸ್ಕೃತೋತ್ಸವ ಎಲ್ಲೆಡೆ ಆಚರಿಸಲಾಗುತ್ತಿದೆ. ಸಂಸ್ಕೃತ ಭಾಷೆ ಶ್ರೇಷ್ಠ ಮಟ್ಟದ ಸಂಸ್ಕಾರವನ್ನು ಕಲಿಸುತ್ತದೆ. ಇದು ಜ್ಞಾನ ಭಾಷೆಯು ಹೌದು ಅನ್ನ ಭಾಷೆಯು ಹೌದು ಎಂದು ಅಭಿಪ್ರಾಯಪಟ್ಟರು.

ಸಂಸ್ಕೃತೋತ್ಸವ ನಿಮಿತ್ತ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾಗಿದ್ದ ಭಗವದ್ಗೀತೆ ಕಂಠಪಾಠ ಸ್ಪರ್ಧೆ, ರಸಪ್ರಶ್ನೆ, ಭಾಷಣ ಸ್ಪರ್ಧೆ, ಪದಸ್ಮರಣೆ ಮತ್ತು ಸಂಸ್ಕೃತದಲ್ಲಿ ಜಾಹಿರಾತು ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಸಂಸ್ಕೃತ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದ ನಂತರ ಶಿಶುಪಾಲವಧಾ ನಾಟಕ ಪ್ರದರ್ಶಿತವಾಯಿತು.

ಕು. ಧಾತ್ರಿ ಮತ್ತು ವೃಂದವರು ಪ್ರಾರ್ಥಿಸಿದರು. ಸಂಸ್ಕೃತೋತ್ಸವ ಸಂಚಾಲಕರಾದ ಡಾ. ಬಿ.ಪಿ. ಷಡಕ್ಷರಿ ಸ್ವಾಗತಿಸಿದರು. ಡಾ. ಸ್ವರ್ಣದತ್ತ ವಂದಿಸಿದರು. ಶ್ರೀ ಎಸ್. ಚಂದ್ರಮೌಳೇಶ್ವರ ಕಾರ್ಯಕ್ರಮ ನಿರೂಪಿಸಿದರು. □




ಮೈಸೂರಿನ ಎಸ್‌ಜೆಸಿಇ ಆವರಣದಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ನಡೆದ ಪೀತಾಂಬರ ದಿನಾಚರಣೆ (8 ಆಗಸ್ಟ್ 2026)

## ಭಜನಾ ಕಾರ್ಯಾಗಾರ

ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತಾಶ್ರಯದಲ್ಲಿ ದಿನಾಂಕ 2.8.2026 ರಿಂದ 5.8.2026 ರವರೆಗೆ ಭಜನಾ ಕಾರ್ಯಾಗಾರ ನಡೆಯಿತು.

### ಅಂತರಂಗದ ಸಾಕ್ಷಾತ್ಕಾರಕ್ಕೆ ಭಜನೆ ಕೀಲಿಕೈ




ಸುತ್ತೂರು ಶ್ರೀಕ್ಷೇತ್ರದಲ್ಲಿ ಆಯೋಜಿಸಿದ್ದ ಭಜನಾ ಕಾರ್ಯಾಗಾರವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಡಾ. ಎನ್.ಬಿ. ಪ್ರಕಾಶ್‌ರವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಡಾ. ಬಿ.ಇ. ರಂಗಸ್ವಾಮಿ, ಶ್ರೀಮತಿ ಬಿ.ಎನ್. ವೀಣಾ, ಪ್ರೊ. ಕೆ. ಅನಂತರಾಮು, ಶ್ರೀ ಕೆ. ರಘುರಾಮ್ ವಾಜಪೇಯಿಯವರು ಹಾಗೂ ಶಿಬಿರಾರ್ಥಿಗಳಿದ್ದಾರೆ. (2 ಆಗಸ್ಟ್ 2026)

ಅಂತರಂಗದ ಸಾಕ್ಷಾತ್ಕಾರಕ್ಕೆ ಭಜನೆ ಅವಶ್ಯಕ ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 2.8.2026ರಂದು ಏರ್ಪಡಿಸಿದ್ದ ಭಜನಾ ಕಾರ್ಯಾಗಾರದಲ್ಲಿ ಜಗದ್ಗುರುಗಳು ಆಶೀರ್ವಚನ ನೀಡಿದರು. ಭಜನೆಯು ಪಾರಂಪರಿಕವಾಗಿ ಬಂದ ಕಲೆಯಾಗಿದೆ. ಮಾನವ ಲೌಕಿಕ ಬದುಕಿನಿಂದ ತನ್ಮಯತೆಗೆ ಕೊಂಡೊಯ್ಯುವ ದಿವ್ಯಶಕ್ತಿಯಾಗಿದೆ. ಶಂಕರಾಚಾರ್ಯ, ರಾಮಾನುಜಚಾರ್ಯ, ಬಸವಣ್ಣ ಹಾಗೂ ದಾಸ ಪರಂಪರೆಯಿಂದ ಇದು ಬೆಳೆದು ಬಂದಿದೆ. ಇದರಲ್ಲಿ ಕರ್ನಾಟಕ ಹಾಗೂ ಹಿಂದುಸ್ತಾನಿ ಸಂಗೀತದ ಸಮ್ಮಿಲನವಿದ್ದು ಮಾನಸಿಕ ಶಾಂತಿ ಹಾಗೂ ಸಂತೋಷಕ್ಕೆ ಕಾರಣವಾಗಿದೆ ಎಂದು ತಿಳಿಸಿದರು.

ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎನ್.ಬಿ. ಪ್ರಕಾಶ್‌ರವರು ಭಜನಾ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಭಜನೆಯು ಗ್ರಾಮೀಣ ಜನರಲ್ಲಿ ಒಗ್ಗಟ್ಟು ಹಾಗೂ ಸಹಕಾರ ಮನೋಭಾವ ತರುತ್ತದೆ.

ಮನಸ್ಸಿನ ಲೌಕಿಕ ಚಿಂತನೆಗಳನ್ನು ದೂರವಿರಿಸಿ ದೈವೀ ಭಾವನೆಯನ್ನು ಮೂಡಿಸುತ್ತದೆ. ಪಾರಂಪರಿಕ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಜನಪದ ಕಲೆಯಾಗಿದೆ ಎಂದರು.

ದಾವಣಗೆರೆ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಬಿ.ಇ. ರಂಗಸ್ವಾಮಿಯವರು ಭಜನಾ ಪರಿಕರಗಳನ್ನು ವಿತರಿಸಿ ಮಾತನಾಡಿ, ಸಮೂಹ ಮಾಧ್ಯಮಗಳು ಬರುವ ಮೊದಲು ಗ್ರಾಮೀಣ ಭಾಗದಲ್ಲಿ ನಾಟಕ, ವೀರಗಾಸೆ, ಕೋಲಾಟ ಹಾಗೂ ದೇವಾಲಯಗಳಲ್ಲಿ ನಡೆಯುತ್ತಿದ್ದ ಭಜನೆಗಳು ಜನರಿಗೆ ಮನೋರಂಜನೆಯನ್ನು ನೀಡುತ್ತಿದ್ದವು. ಭಜನೆ ಜಾತಿ, ಮತ, ಧರ್ಮದ ಬೇಧವಿಲ್ಲದೆ ಜಾತ್ಯತೀತ ಮನೋಭಾವವನ್ನು ಉಂಟುಮಾಡುವ ಸಾಧನವಾಗಿದೆ ಎಂದು ತಿಳಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಮಟ್ಟದ ಉಪಾಧ್ಯಕ್ಷರಾದ ಶ್ರೀ ಕೆ. ರಘುರಾಮ್ ವಾಜಪೇಯಿಯವರು, ಭಜನೆಯ ಮೂಲಕ ಭಗವಂತನಿಗೆ ನವ ವಿಧ ಭಕ್ತಿಯನ್ನು ಸಲ್ಲಿಸಿ ಬ್ರಹ್ಮಾನಂದ ಪಡೆದು ಸಂತೋಷಪಡಬಹುದು. ಪ್ರಕೃತಿಯು ಸಂಗೀತ, ತಾಳ, ಲಯದೊಂದಿಗೆ ಸೃಷ್ಟಿಯಾಗಿದೆ. ಗಿಡ ಮರ ಬಳ್ಳಿಗಳಲ್ಲಿ, ಬೀಸುವ ಗಾಳಿಯಲ್ಲಿ, ಪಕ್ಷಿ ಹಾಗೂ ಜೀವ ಸಂಕುಲಗಳಲ್ಲಿ ಸಂಗೀತ ತುಂಬಿದೆ. ಇಂತಹ ಭವ್ಯ ಪರಂಪರೆಯನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಬ್ದಾರಿಯಾಗಿದೆ ಎಂದರು.

ಮೈಸೂರು ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರಾದ ಶ್ರೀಮತಿ ಬಿ.ಎನ್. ವೀಣಾರವರು, ಭಜನೆಯು ಭಕ್ತಿಯನ್ನು ವ್ಯಕ್ತಪಡಿಸುವ ವಿಶೇಷ ಸಾಧನವಾಗಿದೆ. ದೇಹ ಮತ್ತು ಆತ್ಮದ ಸಂಯಮಕ್ಕೆ ಭಜನೆ ಬಹಳ ಸಹಕಾರಿಯಾಗಿದೆ. ಸಂಗೀತ ಪರಂಪರೆಯನ್ನು ಪ್ರಾರಂಭಿಸಿದ ದಾಸರು ಹಾಗೂ ವಾದಿರಾಜರ ಕೀರ್ತನೆಗಳನ್ನು ಸಮಾಜಕ್ಕೆ ಪರಿಚಯಿಸಿದ ಕೀರ್ತಿ ಭಜನಾ ಪರಂಪರೆಗೆ ಸಲ್ಲುತ್ತದೆ ಎಂದು ನುಡಿದರು.

ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು, ಭಜನೆಯು ಮನಸ್ಸಿಗೆ ಶಾಂತಿ, ದೇವರಲ್ಲಿ ಭಕ್ತಿ ಹಾಗೂ ಸಮಾಜದಲ್ಲಿ ಒಗ್ಗಟ್ಟು ಮೂಡಿಸಲು ಸಹಕಾರಿಯಾಗಿದೆ. ಆಧ್ಯಾತ್ಮಿಕ ಉನ್ನತಿಗೆ ಮತ್ತು ಮನಸ್ಸಿನ ಆರೋಗ್ಯಕ್ಕೆ ನೆರವಾಗುತ್ತದೆ. ಭಗವಂತನ ಸೇವೆ ಮಾಡಲು ಇರುವ ಒಂದು ವಾಙ್ಮಯ ಕ್ರಿಯೆಯಾಗಿದೆ. ದಾಸರು, ಸಂತರು ಭಗವಂತನನ್ನು ಒಲಿಸಿಕೊಳ್ಳಲು ಈ ಮಾರ್ಗವನ್ನು ಅನುಸರಿಸಿದರು. ಸುತ್ತೂರು ಶ್ರೀಮಠವು ನಾಡಿನ ಸಂಸ್ಕೃತಿಯನ್ನು ಸಂರಕ್ಷಿಸಲು ಸಂಗೀತ, ನಾಟಕ, ಭಜನೆ ಧ್ಯಾನ ಹಾಗೂ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕ ಶ್ರಮಿಸುತ್ತಿದೆ ಎಂದು ತಿಳಿಸಿದರು.

ನಂತರ ಪ್ರಾತ್ಯಕ್ಷಿಕೆ, ಭಜನಾ ನೃತ್ಯ ತರಬೇತಿ ಕಾರ್ಯಕ್ರಮಗಳು ಜರುಗಿದವು. ಶ್ರೀಮತಿ ಭಾಗ್ಯಲಕ್ಷ್ಮಿ ಹಾಗೂ ಶ್ರೀಮತಿ ಕೆ. ಜಯಶ್ರೀ ಪ್ರಾರ್ಥಿಸಿದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿ ಸ್ವಾಗತಿಸಿದರು. ಶ್ರೀ ಆರ್.ಎಸ್. ಕುಮಾರ್ ವಂದಿಸಿದರು, ಶ್ರೀಮತಿ ಎಸ್. ಸವಿತ ಕಾರ್ಯಕ್ರಮ ನಿರೂಪಿಸಿದರು.

□

ಸಕಲ ಗಣಂಗಳು  
ತಮ್ಮ ವಚನಾನುಭಾವವೆಂಬ ಪರಮಾಮೃತವನು  
ಎನ್ನ ಕರ್ಣವೆಂಬ ಕುರುಹ ಕಟ್ಟಿ ಎರಕವೆರೆಯಲು  
ಅದು ಮನದಲ್ಲಿ ಮೂರ್ತಿಯಾಗಿ  
ಒಳಗೆ ಪ್ರಾಣಲಿಂಗವಾಯಿತ್ತು ; ಹೊರಗೆ ಇಷ್ಟಲಿಂಗವಾಯಿತ್ತು  
ಎನ್ನೊಳಹೊರಗೆ ಭರಿತವಾದ  
ಅಖಂಡೇಶ್ವರನೆಂಬ ಪರಶಿವನು  
ನುಡಿಸಿದಂತೆ ನುಡಿದೆನಲ್ಲದೆ  
ಎನ್ನ ಮನಕ್ಕೆಬಂದಂತೆ ನುಡಿಯಲಿಲ್ಲ ಕೇಳಿರೆ  
– ಷಣ್ಮುಖಸ್ವಾಮಿ

## ಭಗವಂತ ಮತ್ತು ಭಕ್ತರ ನಡುವಿನ ಸೇತುವೆಯೇ ಭಜನೆ




ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಭಜನಾ ಕಾರ್ಯಾಗಾರದ ಸಮಾರೋಪದಲ್ಲಿ 'ಕನ್ನಡಪ್ರಭ' ದಿನಪತ್ರಿಕೆಯ ಸಂಪಾದಕರಾದ ಶ್ರೀ ಗಿರೀಶ್ ರಾವ್ ಹತ್ವಾರ್ (ಜೋಗಿ) ಅವರು ಭಾಷಣ ಮಾಡಿದರು. ಶ್ರೀ ಗುಂಡಪ್ಪಗೌಡ, ಡಾ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಹಾಗೂ ಶ್ರೀಮತಿ ಶೈಲಜಾ ಪ್ರಿಯದರ್ಶಿನಿಯವರುಗಳಿದ್ದಾರೆ. (6 ಆಗಸ್ಟ್ 2026)

ಭಗವಂತ ಮತ್ತು ಭಕ್ತರ ನಡುವಿನ ಸೇತುವೆಯೇ ಭಜನೆಯಾಗಿದೆ ಎಂದು ಕನ್ನಡಪ್ರಭ ದಿನಪತ್ರಿಕೆಯ ಸಂಪಾದಕರು ಹಾಗೂ ಸಾಹಿತಿಗಳು ಆದ ಶ್ರೀ ಗಿರೀಶ್ ರಾವ್ ಹತ್ವಾರ್ (ಜೋಗಿ) ಅವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 6.8.2026 ರಂದು ನಡೆದ ಭಜನಾ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಜನಪದರು ಭಗವಂತನಿಗೆ ಪ್ರೀತಿಯಿಂದ ಭಕ್ತಿಯನ್ನು ಭಜನೆಯ ಮೂಲಕ ಸಮರ್ಪಿಸುತ್ತಾರೆ. ಇದು ವಿಶಿಷ್ಟವಾದ ಸಂತೋಷದ ಅನುಭವವನ್ನು ಕೊಡುತ್ತದೆ. ಮನಸ್ಸಿನ ಎಲ್ಲಾ ದುಗುಡಗಳನ್ನು ದೂರ ಮಾಡಿ ಶಾಂತಿ, ನೆಮ್ಮದಿ ಪಡೆಯಲು ಮನೆಯಲ್ಲಿ ನಾವುಗಳು ಭಜನೆಯನ್ನು ಮಾಡಬೇಕು. ಕಾವ್ಯದ ಭಾಷೆ, ದೈವತ್ವದ ಭಾಷೆ ಎರಡೂ ಒಂದೆ. ನಿರಾಕಾರ, ನಿರ್ಗುಣ ಹಾಗೂ ಅನಂತದಲ್ಲಿ ನಂಬಿಕೆಯಿಡಬೇಕು ಎಂದು ತಿಳಿಸಿದರು.

ಕರ್ನಾಟಕ ಉಚ್ಚ ನ್ಯಾಯಾಲಯದ ಅಡ್ವೊಕೇಟ್ ಜನರಲ್‌ರವರ ಕಚೇರಿಯ ಆಡಳಿತಾಧಿಕಾರಿಗಳಾದ ಶ್ರೀಮತಿ ಶೈಲಜಾ ಪ್ರಿಯದರ್ಶಿನಿಯವರು, ಯುವ ಪೀಳಿಗೆಯು ಭಜನೆ ಅಭ್ಯಾಸ ಮಾಡುತ್ತಿರುವುದು ನಮ್ಮ ಸುದೈವ. ಭಕ್ತಿಸುಧೆಯಿಂದ ಮೋಕ್ಷವನ್ನು ಪಡೆಯಬಹುದು. ದೇವರ ಆರಾಧನೆಯನ್ನು ಕಟ್ಟಕಡೆಯ ವ್ಯಕ್ತಿಗೂ ದೊರೆಯುವಂತೆ ಮಾಡುವ ಶಕ್ತಿ ಭಜನೆಗಿದೆ ಎಂದು ನುಡಿದರು.

ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಶ್ರೀ ಗುಂಡಪ್ಪಗೌಡರು, ಪ್ರಾಚೀನ ಕಾಲದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಪ್ರತಿನಿತ್ಯ ಜನರು ಕೃಷಿ ಚಟುವಟಿಕೆಗಳನ್ನು ಮುಗಿಸಿ ಸಂಜೆಯ ಸಮಯದಲ್ಲಿ ಭಜನೆ ಮಾಡುತ್ತಿದ್ದರು.

ಭಜನೆಯನ್ನು ಹಾಡುವ ಹಾಗೂ ಆಲಿಸುವ ಸಂಸ್ಕೃತಿ ಜನರಲ್ಲಿತ್ತು. ಕಬೀರ್‌ದಾಸರು, ತ್ಯಾಗರಾಜರು, ಮೀರಾಬಾಯಿ ಮೊದಲಾದವರು ಭಜನೆಯ ಮೂಲಕ ದೇವರನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದರು ಎಂದು ತಿಳಿಸಿದರು.

ಮಲೆಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಬೃಹನ್ಮಠದ ಡಾ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಮಕ್ಕಳಲ್ಲಿ ಭಾರತೀಯ ಪರಂಪರೆಯ ಸಂಸ್ಕಾರವನ್ನು ಬಿತ್ತಿ, ವ್ಯಕ್ತಿತ್ವದ ವಿಕಾಸಕ್ಕೆ ಸುತ್ತೂರು ಶ್ರೀಮಠವು ನೆರವಾಗುತ್ತಿದೆ. ಪ್ರಾಚೀನ ಭಾರತೀಯ ಕಲೆಗಳನ್ನು ತಿಳಿಸುವುದರ ಮೂಲಕ ಜನಸಾಮಾನ್ಯರಿಗೂ ಭಕ್ತಿ ಮಾರ್ಗ ದೊರೆಯುವಂತೆ ಮಾಡಿದೆ ಎಂದರು.

ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಪರಮಪೂಜ್ಯ ಜಗದ್ಗುರುಗಳವರು, ಲೌಕಿಕ ಜಂಜಾಟಗಳನ್ನು ಮರೆತು ಭಗವಂತನ ಸ್ಮರಣೆ ಮಾಡಿ ಭಾವಲೋಕದಲ್ಲಿ ವಿಹರಿಸಲು ಭಜನೆಯು ಸಹಕಾರಿಯಾಗಿದೆ. ಪುರಂದರದಾಸರು, ಕನಕದಾಸರು, ಅಕ್ಕಮಹಾದೇವಿ ಹಾಗೂ ಬಸವಣ್ಣನವರು ಭಗವಂತನಲ್ಲಿ ತಮ್ಮ ಮನಸ್ಸಿನ ಹಂಬಲವನ್ನು ಭಜನೆಯ ಮೂಲಕ ಸಮರ್ಪಿಸುತ್ತಿದ್ದರು. ನಿತ್ಯ ಮನೆಗಳಲ್ಲಿ ಭಜನೆ ಮಾಡುವ ಅಭ್ಯಾಸವನ್ನು ಬೆಳೆಸಿಕೊಂಡು ಮಾನಸಿಕ ಶಾಂತಿ ಪಡೆಯಬೇಕು ಎಂದರು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಉಪ್ಪುಂದ ರಾಜೇಶ್ ಪಡಿಯಾರ್, ಶ್ರೀ ಶ್ರೀನಿವಾಸ್ ಯರ್ಲಾಪಾಡಿರವರು ಶಿಬಿರದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಶಿಬಿರಾರ್ಥಿಗಳಾದ ಶ್ರೀ ಡಿ.ಟಿ. ಗೋಪಿನಾಥ್, ಶ್ರೀಮತಿ ಜಿ. ಸುಪ್ರಭ, ಜಿ. ತ್ರಿಗುಣರವರು ಅನಿಸಿಕೆಯನ್ನು ಹಂಚಿಕೊಂಡರು. ತರಬೇತಿ ಪಡೆದ ಕಲಾವಿದರು ಭಜನೆ, ಮಂಡಲ ಭಜನೆ ಹಾಗೂ ಭಜನೋತ್ಸವದ ಪ್ರದರ್ಶನ ನೀಡಿದರು. ಶ್ರೀ ಪಂಚಾಕ್ಷರಿಸ್ವಾಮಿ ಪ್ರಾರ್ಥಿಸಿದರು. ಡಾ. ಡಿ.ಎಂ. ಮಹೇಂದ್ರಮೂರ್ತಿ ಸ್ವಾಗತಿಸಿದರು. ಶ್ರೀ ಎ.ಎಂ. ಶಿವಕುಮಾರಸ್ವಾಮಿ ವರದಿ ಮಂಡಿಸಿದರು. ಶ್ರೀ ಆರ್.ಎಸ್. ಕುಮಾರ್ ವಂದಿಸಿದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿ ನಿರೂಪಿಸಿದರು.

## ಭಕ್ತಿಸಾಹಿತ್ಯಕ್ಕೆ ಮಹಿಳಾ ಹರಿದಾಸರ ಕೊಡುಗೆ ಅಪಾರ

"ಭಕ್ತಿ ಸಾಹಿತ್ಯಕ್ಕೆ ಮಹಿಳಾ ಹರಿದಾಸರ ಕೊಡುಗೆ ಶ್ಲಾಘನೀಯವಾದುದು" ಎಂದು ವಿದುಷಿ ಶ್ರೀಮತಿ ಸುಕನ್ಯಾ ಪ್ರಭಾಕರ್‌ರವರು ಅಭಿಪ್ರಾಯಪಟ್ಟರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಭಜನಾ ಕಾರ್ಯಾಗಾರದಲ್ಲಿ ದಿನಾಂಕ 3.8.2026 ರಂದು ಅವರು ಉಪನ್ಯಾಸ ನೀಡಿದರು. ಕರ್ನಾಟಕ ಹರಿದಾಸರ ಪರಂಪರೆಯಲ್ಲಿ ಭಕ್ತಿ ಸಾಹಿತ್ಯಕ್ಕೆ ಪುರುಷರಷ್ಟೇ ಮಹಿಳೆಯರ ಕೊಡುಗೆ ಅಪಾರವಾದುದ್ದಾಗಿದೆ. ಭಕ್ತಿಲೋಕದ ಅಲೌಕಿಕ ಅನುಭವಗಳಿಗೆ ತಮ್ಮನ್ನು ಒಡ್ಡಿಕೊಳ್ಳುತ್ತಾ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದಾರೆ. ಮಹಿಳಾ ಹರಿದಾಸರಲ್ಲಿ ಗಲಗಲಿಯ ಅವ್ವ ಎಂದೇ ಪ್ರಸಿದ್ಧರಾಗಿರುವ ರಮಾಬಾಯಿ, ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವ, ನಂಜನಗೂಡು ತಿರುಮಲಾಂಬಾ, ಬಳ್ಳಾರಿ ರಾಧಾಬಾಯಿ, ಕಳಸದ ಸುಂದರಮ್ಮ, ಅಂಬಾಬಾಯಿ, ಗುಂಡಮ್ಮ ಮತ್ತು ಸರಸ್ವತಿಬಾಯಿ ಮುಂತಾದ ಮಹಿಳಾ ಹರಿದಾಸರು ಸಾಮಾಜಿಕವಾಗಿ ಹೊಸಕ್ರಾಂತಿಯನ್ನು ಸದ್ದಿಲ್ಲದೇ ಮಾಡಿಹೋದರು. ವಿಷಾದ ಮೂಡಿಸುವ ಸಂಗತಿಯೆಂದರೆ ಮಹಿಳಾ ಹರಿದಾಸರಲ್ಲಿ ಹೆಚ್ಚಿನವರು ಬಾಲವಿಧವೆಯರು. ಹದಿಹರೆಯದ ಬಾಲಕಿಯರನ್ನು ವೃದ್ಧ ವರನಿಗೆ ವಿವಾಹ ಮಾಡಿಕೊಟ್ಟ ಅಕ್ಷಮ್ಯದ ನಿದರ್ಶನಗಳು, ಅರಳುವ ಮುನ್ನವೇ ಬಾಡಿಹೋದ ಬದುಕುಗಳು, ಹೀಗೆ ಬಾಡಿಹೋಗುತ್ತಿದ್ದ ಜೀವಗಳಿಗೆ ಸಂಜೀವಿನಿಯಾಗಿ ದೊರೆಕಿದ್ದು ಹರಿಯ ಸೇವೆ. ಹರಿಯ ಆರಾಧನೆ ಅವರಲ್ಲಿ ನೆಮ್ಮದಿ ಮೂಡಿಸಿತೋ



ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಿದ್ದ ಭಜನಾ ಕಾರ್ಯಾಗಾರದಲ್ಲಿ ವಿದುಷಿ ಸುಕನ್ಯಾ ಪ್ರಭಾಕರ್‌ರವರು ಉಪನ್ಯಾಸ ನೀಡುತ್ತಿರುವುದು. ಕಾರ್ಯಾಗಾರದಲ್ಲಿ ಭಾಗವಹಿಸಿರುವ ಭಜನಾತಂಡಗಳು ಅಸಕ್ತಿಯಿಂದ ಆಲಿಸುತ್ತಿರುವುದು. (3 ಆಗಸ್ಟ್ 2026)

ಏನೋ? ಕೆಲವರಿಗೆ ತಂದೆಯಂತೆ ಕಂಡರೆ ಅವನನ್ನು ಪೂಜಿಸಿದರು, ಸಖನೆಂದುಕೊಂಡು ಹರಟೆ ವಾಗ್ವಾದ ನಡೆಸಿ, ಹಾಡಿ ಕುಣಿದರು, ಜೋಕಾಲಿಯಾಡಿದರು, ವಾಸ್ತವಕ್ಕೆ ಇಳಿದಾಗ ಅವನ ಹೆಗಲಿಗೆ ತಲೆಯಿಟ್ಟು ರೋದಿಸಿದರು ಎಂದರು.

ಚಿಕ್ಕ ವಯಸ್ಸಿನ ಮಹಿಳಾ ಹರಿದಾಸರು ಪ್ರಪಂಚದ ಜೀವವಿರೋಧಿ ನೀತಿಗೆ ನೊಂದು ಯಾಕೆನಗೆ ವೈರಾಗ್ಯ ಪುಟ್ಟಲಿಲ್ಲವೋ ದೇವಾ ಎಂದು ಪ್ರಶ್ನಿಸಿಕೊಂಡು ಅಸಾರವಾದ ಸಂಸಾರದಿಂದ ಪಾರು ಮಾಡುವುದೆಂದಿಗೋ ರಂಗಯ್ಯ ಎಂದು ಗೋಗರೆದರು. ಮಹಿಳಾ ಹರಿದಾಸರದು ಯಾರ ಬೆಂಬಲವೂ ಇಲ್ಲದೆ ತಮ್ಮದೇ ಆದ ರೀತಿಯಲ್ಲಿ ಸಮಾಜವನ್ನು ಎದುರಿಸಿದವರು. ಸಮಾಜದ ಹರಿತವಾದ ಕುಡುಗೋಲಿಗೆ ತಮ್ಮ ಬದುಕು ಬಲಿಯಾಗಿದ್ದರೂ, ಸಮಾಜಕ್ಕೆ ಅವರು ಕೀರ್ತನೆಗಳ ಹೂ ಮಳೆಯನ್ನು ನೀಡಿದ್ದಾರೆ. ಈ ಎಲ್ಲಾ ಮಹಿಳಾ ಹರಿದಾಸರದು ನಿವೇದನಾ ಕಾವ್ಯ. ಒಬ್ಬೊಬ್ಬರ ಬದುಕು ಒಂದೊಂದು ಕಾವ್ಯ. ಅವರವರ ಕಾವ್ಯದಲ್ಲಿ ಅವರೇ ನಾಯಕಿಯರು, ನಾಯಕ ಮಾತ್ರ ಅವನೊಬ್ಬ ಮಾಂತ್ರಿಕ, ಶ್ರೀಕೃಷ್ಣ ಎಂದು ಹೇಳಿದರು.

ನಂತರ ಉಡುಪಿಯ ಶ್ರೀನಿವಾಸ ಪೂಜಾರಿ ಯರ್ಲಾಪಾಡಿ ಮತ್ತು ತಂಡದವರು ನೃತ್ಯ ಭಜನಾ ತರಬೇತಿ ಹಾಗೂ ಉಪ್ಪುಂದ ರಾಜೇಶ ಪಡಿಯಾರರವರು ಭಜನಾ ತರಬೇತಿ ನೀಡಿದರು

## ಕ್ರೀಡಾ ಸಾಧನೆ



ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಓಕಿನವ ಶೋರಿನ್ ರಿಯೂ ಕರಾಟೆ ಶಾಲೆಯ ಆಶ್ರಯದಲ್ಲಿ ನಡೆದ ರಾಷ್ಟ್ರಮಟ್ಟದ ಕರಾಟೆ ಚಾಂಪಿಯನ್‌ಶಿಪ್ ಇಂಡಿಪೆಂಡೆನ್ಸ್ ಡೇ ಕಪ್ 2026 ಸ್ಪರ್ಧೆಯಲ್ಲಿ **ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯ** 7ನೇ ತರಗತಿ ವಿದ್ಯಾರ್ಥಿನಿ ಕು. ವೈಷ್ಣವಿ ಅವರು ಕಟಾ ಮತ್ತು ಕುಮಿಟೆ ಎಂಬ ಎರಡು ವಿಭಾಗಗಳಲ್ಲಿ ಭಾಗವಹಿಸಿ ಪ್ರಥಮ ಬಹುಮಾನ ಪಡೆದಿದ್ದಾರೆ. ವಿಜೇತ ಕ್ರೀಡಾಪಟುವಿಗೆ ಅಭಿನಂದನೆಗಳು.

## ಭವಶ್ರುತಿಗಿಂತ ಭಾವಶ್ರುತಿ ಶ್ರೇಷ್ಠ



ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಿರುವ ಭಜನಾ ಕಾರ್ಯಾಗಾರದಲ್ಲಿ ಪ್ರೊ. ಎಂ. ಕೃಷ್ಣೇಗೌಡರವರು ಉಪನ್ಯಾಸ ನೀಡುತ್ತಿರುವುದು. ಕಾರ್ಯಾಗಾರದಲ್ಲಿ ಭಾಗವಹಿಸಿರುವ ಭಜನಾತಂಡಗಳು ಆಸಕ್ತಿಯಿಂದ ಆಲಿಸುತ್ತಿರುವುದು. (4 ಆಗಸ್ಟ್ 2026)

ಭವಶ್ರುತಿಗಿಂತ ಭಾವಶ್ರುತಿ ಶ್ರೇಷ್ಠವಾದುದು ಎಂದು ಪ್ರೊ. ಎಂ. ಕೃಷ್ಣೇಗೌಡರವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಿದ್ದ ಭಜನಾ ಕಾರ್ಯಾಗಾರದಲ್ಲಿ ದಿನಾಂಕ 4.8.2026ರಂದು ಅವರು ಉಪನ್ಯಾಸ ನೀಡಿದರು. ಬಾಹ್ಯ ಆಚರಣೆ ಅಥವಾ ಶಬ್ದದ ಹಿರಿಮೆಗಿಂತ ಹೃದಯದಲ್ಲಿನ ಶುದ್ಧ ಪ್ರೀತಿ ಮತ್ತು ಭಕ್ತಿಯ ಅನುಭವವೇ ಶ್ರೇಷ್ಠ. ಸಂಗೀತ, ಸಾಹಿತ್ಯ ಹಾಗೂ ಆಧ್ಯಾತ್ಮಿಕ ಸಾಧನೆಯಲ್ಲಿ ಸಮರ್ಪಣಾ ಮನೋಭಾವ ಹೊಂದಿರಬೇಕು. ಭಜನೆ ಹೃದಯದ ಸ್ಪರ್ಶಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತದೆ. ಗ್ರಾಮೀಣ ಭಜನಾ ಪರಂಪರೆಯು ನಮ್ಮ ಹಳ್ಳಿಗಳ ಜಾನಪದ ಹಾಗೂ ಆಧ್ಯಾತ್ಮಿಕ ಸಂಸ್ಕೃತಿಯ ಜೀವನಾಡಿಯಾಗಿದೆ. ಹಳ್ಳಿಗಳಲ್ಲಿ ಜನರನ್ನು ಒಗ್ಗೂಡಿಸುವ ಮತ್ತು ಧರ್ಮ-ಸಂಸ್ಕೃತಿಯನ್ನು ಉಳಿಸುವ ದೊಡ್ಡ ಶಕ್ತಿಯಾಗಿದೆ. ಪ್ರತಿಯೊಬ್ಬರ ಅಂತರಾಳದ ಮನಸ್ಸನ್ನು ಶುದ್ಧಮಾಡುವ ಶಕ್ತಿಯನ್ನು ಭಜನಾ ಸಂಸ್ಕೃತಿಯಲ್ಲಿ ಕಾಣುತ್ತೇವೆ. ಜಾತಿ, ಮತ ಭೇದವಿಲ್ಲದೆ ಎಲ್ಲರೂ ಒಂದಾಗಿ ಕುಳಿತು ಭಜನೆ ಮಾಡುವುದರಿಂದ ಶಾಂತಿ ಮತ್ತು ಒಗ್ಗಟ್ಟು ಮೂಡುತ್ತದೆ. ಹಳೆಯ ಮೌಲ್ಯಗಳು, ಭಕ್ತಿ ಮತ್ತು ನೈತಿಕ ಪಾಠಗಳು ಹಾಡಿನ ಮೂಲಕ ಮುಂದಿನ ತಲೆಮಾರಿಗೆ ವರ್ಗಾಯಿಸಲ್ಪಡುತ್ತವೆ. ತತ್ವಪದಗಳ ಮೂಲಕ ಬದುಕಿನ ನೈಜ ಸತ್ಯ ಹಾಗೂ ಮಾನವೀಯ ಮೌಲ್ಯಗಳನ್ನು ಸಾರಲಾಗುತ್ತದೆ ಎಂದರು.

ಆರಾಧನಾ ಕಲೆಯಾದ ಭಜನಾ ಸಂಪ್ರದಾಯಕ್ಕೆ ಸಾಹಿತ್ಯ ಪರಂಪರೆಯಿದೆ. ಭಕ್ತಿಪಂಥದ ಪರಂಪರೆಯೇ ಭಜನೆಗೆ ಹಿನ್ನೆಲೆಯಾಗಿದೆ. ದಾಸ ಸಾಹಿತ್ಯದ ನೇತಾರರೂ ಇದೇ ಪರಂಪರೆಯಲ್ಲಿ ಬರುತ್ತಾರೆ. ಇತ್ತೀಚಿನ ದಿನಗಳಲ್ಲಿ ಭಜನೆಯನ್ನು ಜನಪದ ಪರಂಪರೆಗೆ ತಂದು ನಿಲ್ಲಿಸಿದ ಅನೇಕ ಹಿರಿಯ ಕವಿಗಳು ಇಲ್ಲಿ ಆಗಿ ಹೋಗಿದ್ದಾರೆ. ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫರು, ಕೂಡಲೂರು ಬಸವಲಿಂಗ ಶರಣರು ಕರ್ನಾಟಕದಲ್ಲಿ ಭಜನೆ

ಸಂಪ್ರದಾಯವನ್ನು ಬೆಳೆಸಿದವರಾಗಿದ್ದಾರೆ ಎಂದು ತಿಳಿಸಿದರು.

ಉಡುಪಿಯ ಶ್ರೀನಿವಾಸ ಪೂಜಾರಿ ಯರ್ಲಪಾಡಿ ಮತ್ತು ತಂಡದವರು ನೃತ್ಯ ಭಜನಾ ತರಬೇತಿ ಹಾಗೂ ಉಪ್ಪುಂದ ರಾಜೇಶ ಪಡಿಯಾರರವರು ಭಜನಾ ತರಬೇತಿ ನೀಡಿದರು. ಬೆಳಗ್ಗೆ ಭಜನಾ ತಂಡದ ಸದಸ್ಯರು ಯೋಗಾಭ್ಯಾಸ ಮತ್ತು ಧ್ಯಾನದಲ್ಲಿ ಭಾಗಿಯಾಗಿದ್ದರು. ಸುತ್ತೂರು ದರ್ಶನದಲ್ಲಿ ಶ್ರೀಮಠದ ಗುರುಪರಂಪರೆಯ ಅನಿಮೇಷನ್ ಸಾಕ್ಷ್ಯಚಿತ್ರವನ್ನು ವೀಕ್ಷಿಸಿ ಶ್ರೀಮಠದ ಭವ್ಯ ಇತಿಹಾಸ ಅರಿತರು. ಮೂಲಮಠ ಶ್ರೀ ಸೋಮೇಶ್ವರ ದೇವಸ್ಥಾನ, ಶ್ರೀ ಮಹದೇಶ್ವರರು ರಾಗಿಬೀಸಿದ ಕಲ್ಲು ಹಾಗೂ ಶ್ರೀ ವೀರಭದ್ರೇಶ್ವರ ದೇವಸ್ಥಾನಗಳ ದರ್ಶನ ಪಡೆದು ಪುನೀತರಾದರು. ಕೃಷಿ ವಿಜ್ಞಾನ ಕೇಂದ್ರದಲ್ಲಿ ಬೆಳೆಗಳ ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದರು. ಗೋಶಾಲೆಯಲ್ಲಿ ದೇಸಿ ಗೋತಳಿಗಳ ಬಗ್ಗೆ ಮಾಹಿತಿ ಪಡೆದರು.

## ಮನಮನದಲ್ಲೂ ಭಜನೆಯ ಕಂಪು ಹರಡಲಿ



ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಿದ್ದ ಭಜನಾ ಕಾರ್ಯಾಗಾರದಲ್ಲಿ ಪ್ರೊ. ಕೆ. ರಾಮಮೂರ್ತಿರಾವ್‌ರವರು ಉಪನ್ಯಾಸ ನೀಡುತ್ತಿರುವುದು. ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಭಜನಾತಂಡಗಳು ಆಸಕ್ತಿಯಿಂದ ಆಲಿಸುತ್ತಿರುವುದು. (5 ಆಗಸ್ಟ್ 2026)

'ಮನಮನದಲ್ಲೂ ಭಜನೆಯ ಕಂಪು ಸೂಸುತ್ತಿರಬೇಕು' ಎಂದು ಪ್ರೊ. ಕೆ. ರಾಮಮೂರ್ತಿರಾವ್‌ರವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಿದ್ದ ಭಜನಾ ಕಾರ್ಯಾಗಾರದಲ್ಲಿ ದಿನಾಂಕ 5.8.2026 ರಂದು ಅವರು ಉಪನ್ಯಾಸ ನೀಡಿದರು. ಭಜನೆ ನಮ್ಮ ದೇಶದ ಸಂಸ್ಕೃತಿಯಾಗಿದೆ. ಭಜನೆ ಇದ್ದಲ್ಲಿ ವಿಭಜನೆ ಇರುವುದಿಲ್ಲ, ನಿರ್ಮಲ ಭಕ್ತಿಯಿಂದ ಪರಮಾತ್ಮನನ್ನು ಸ್ಪರ್ಶಿಸಿ, ಅನುಗ್ರಹ ಪಡೆಯುವ ಸರಳ ಮಾಧ್ಯಮವಾಗಿದೆ. ಪ್ರತಿಯೊಬ್ಬರ ಮನಸ್ಸಿನಲ್ಲಿ ದೈವ ಭಕ್ತಿ, ಶಾಂತಿ ಮತ್ತು ಸಕಾರಾತ್ಮಕತೆಯ ಪರಿಮಳವು ಸದಾ ಕಾಲ ಹರಡಿಕೊಂಡಿರಬೇಕು. ಭಜನೆಯು

ಮನಸ್ಸಿಗೆ ನೆಮ್ಮದಿ ನೀಡುತ್ತದೆ, ಕೆಟ್ಟ ಯೋಚನೆಗಳನ್ನು ದೂರ ಮಾಡುತ್ತದೆ. ಸಮಾಜದಲ್ಲಿ ಪ್ರೀತಿ–ವಿಶ್ವಾಸವನ್ನು ಮೂಡಿಸುತ್ತದೆ. ಗ್ರಾಮೀಣ ಭಜನೆಯು ಜನಪದರ ಭಕ್ತಿ ಸಂಪ್ರದಾಯದ ಜೀವನಾಡಿಯಾಗಿದೆ. ಹಳ್ಳಿಯ ಜನರನ್ನು ಒಟ್ಟುಗೂಡಿಸುವ, ನೈತಿಕತೆ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಉಳಿಸಿ ಬೆಳೆಸುವ ಪ್ರಾಚೀನ ಕಲೆಯಾಗಿದೆ. ದಾಸ ಪರಂಪರೆ ಹಾಗೂ ಶರಣರ ಕಾಲದಿಂದಲೂ ನಾಮಸ್ಮರಣೆ ಮತ್ತು ಸಾಮೂಹಿಕ ಗಾಯನಕ್ಕೆ ಹೆಚ್ಚಿನ ಪ್ರಾಮುಖ್ಯತೆ ಸಿಕ್ಕಿದೆ. ಜಾತಿ–ಮತಗಳ ಭೇದವಿಲ್ಲದೆ ಊರಿನ ಜನರೆಲ್ಲಾ ಒಟ್ಟಾಗಿ ಸೇರುವ ವೇದಿಕೆಯಾಗಿ ಭಜನೆ ರೂಪುಗೊಂಡಿತು ಎಂದರು.

ಭಗವಂತನ ಅನುಗ್ರಹ ಪಡೆಯಲು ಒಂಬತ್ತು ವಿಧದ ಭಕ್ತಿ ಮಾರ್ಗಗಳನ್ನು ಕಾಣುತ್ತೇವೆ. ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನ. ದೇವರ ಕಥೆಗಳು, ಪುರಾಣಗಳು ಮತ್ತು ಭಗವಂತನ ನಾಮ–ಮಹಿಮೆಗಳನ್ನು ಭಕ್ತಿಯಿಂದ ಕೇಳುವುದು, ಕೀರ್ತಿ, ಗುಣಗಾನ ಹಾಗೂ ನಾಮಗಳನ್ನು ಹಾಡುವುದು, ಮನಸ್ಸಿನಲ್ಲಿ ಭಗವಂತನ ರೂಪ ಮತ್ತು ನಾಮವನ್ನು ನೆನೆಯುವುದು, ಚರಣಗಳಿಗೆ ಭಕ್ತಿಯಿಂದ ಸೇವೆ ಮಾಡುವುದು, ಹೂವು, ಗಂಧ ಮುಂತಾದವುಗಳಿಂದ ವಿಧಿವತ್ತಾಗಿ ಪೂಜಿಸುವುದು, ನಮಸ್ಕರಿಸುವುದು ಮತ್ತು ಶರಣಾಗುವುದು. ಭಗವಂತನ ಸೇವಕನಾಗಿ ಸೇವೆ ಮಾಡುವುದು, ಪರಮ ಸ್ನೇಹಿತನಂತೆ ಪ್ರೀತಿಸಿ ಅನ್ಯೋನ್ಯವಾಗಿರುವುದು, ತನು, ಮನ, ಧನವನ್ನು ಅರ್ಪಿಸುವುದು– ಇವುಗಳೇ ಒಂಬತ್ತು ವಿಧದ ಭಕ್ತಿ ಮಾರ್ಗಗಳಾಗಿವೆ. ದೈವಿಕ ಅನುಗ್ರಹ ಪಡೆಯಲು ನಮ್ಮ ಪೂರ್ವಜರು ಭಕ್ತಿ ಸಮರ್ಪಣೆಯನ್ನು ಭಜನೆಯ ಮೂಲಕ ಮಾಡುತ್ತಿದ್ದರು ಎಂದು ತಿಳಿಸಿದರು.



ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಿದ್ದ ಭಜನಾ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಕರ್ತೃಗದ್ದುಗೆಯ ಮಹಾದ್ವಾರದಿಂದ ಭಜನಾತಂಡದ ಮಕ್ಕಳು ಮತ್ತು ಮಹಿಳೆಯರು ಹಾಡುಗಳಿಗೆ ನರ್ತಿಸುತ್ತಾ ಪರಮಪೂಜ್ಯರು ಹಾಗೂ ಅತಿಥಿಗಳನ್ನು ವೇದಿಕೆಗೆ ಮೆರವಣಿಗೆಯ ಮೂಲಕ ಕರೆತರುತ್ತಿರುವುದು. (2 ಆಗಸ್ಟ್ 2026)

# ಯುವಜನತೆ ದೇಶವನ್ನು ಮುನ್ನಡೆಸಬೇಕು




ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಸ್ನಾತಕ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಯನ್ನು ಡಾ. ಕೆ. ಜಯಪ್ರಕಾಶ್‌ರಾವ್‌ರವರು ಉದ್ಘಾಟಿಸಿದರು. (8 ಆಗಸ್ಟ್ 2026)

ಭಾರತವು ಇಂದಿನ ಹಲವು ಸವಾಲುಗಳನ್ನು ಸಮರ್ಥವಾಗಿ ಎದುರಿಸುತ್ತಿದೆ. ಭಾರತೀಯರು ತಮ್ಮದೇ ಕೌಶಲ್ಯ, ಬುದ್ಧಿವಂತಿಕೆ ಮತ್ತು ಪರಿಶ್ರಮದಿಂದ ದೇಶ ವಿದೇಶಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಅಸ್ಮಿತೆಯಿಂದ ಮಿಂಚುತ್ತಿದ್ದಾರೆ. ಇಂದಿನ ಯುವಜನತೆ ಇದನ್ನು ಗ್ರಹಿಸಿ, ಮುಂದಿನ ಭಾರತವನ್ನು ಅಭಿಮಾನ, ಛಲ ಮತ್ತು ಕಿಚ್ಚಿನಿಂದ ಮುನ್ನಡೆಸುವ ಜವಾಬ್ದಾರಿಯನ್ನು ಹೊರಬೇಕು. ಭಾರತಕ್ಕಾಗಿಯೇ ದುಡಿಯುವ ಯುವಜನತೆಯ ಅವಶ್ಯಕತೆ ಇಂದು ತುಂಬಾ ಇದೆ ಎಂದು ರಕ್ಷಣಾ ಸಂಶೋಧನಾ ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಓ) ವಿಶ್ರಾಂತ ಪ್ರಧಾನ ಸಾರ್ವಜನಿಕ ಸಂಪರ್ಕಾಧಿಕಾರಿಗಳಾದ ಡಾ. ಕೆ. ಜಯಪ್ರಕಾಶ್‌ರಾವ್‌ರವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ನಡೆದ ಸ್ನಾತಕ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮೂಲಭೂತ ಶಿಕ್ಷಣ ಪ್ರತಿಯೊಬ್ಬ ವಿದ್ಯಾರ್ಥಿಗೂ ಅವಶ್ಯಕ. ಉದ್ಯೋಗವನ್ನಷ್ಟೇ ಕೇಂದ್ರೀಕರಿಸಿ ಶಿಕ್ಷಣವನ್ನು ಪಡೆಯಬಾರದು. ಉತ್ತಮ ನಾಗರಿಕರಾಗಲು ಶಿಕ್ಷಣವನ್ನು ಪಡೆಯಬೇಕು. ಡಾ. ಎ. ಪಿ.ಜೆ ಅಬ್ದುಲ್ ಕಲಾಂ ಅವರು ಭಾವಿಸಿದ್ದಂತೆ ಭಾರತಕ್ಕಾಗಿ ಕೆಲಸ ಮಾಡದೆ ಇರುವುದು ಆತ್ಮವಂಚನೆ ಎಂಬುದನ್ನು ಅರಿಯಬೇಕು. ಇಂದು ಭಾರತ ಸ್ವಾತಂತ್ರ್ಯಗೊಂಡಿದ್ದರೂ ಹಲವು ವಿಷಯಗಳಲ್ಲಿ ಸ್ವಾವಲಂಬನೆಯನ್ನು ಸಾಧಿಸುವ ಮೂಲಕ ನಿಜವಾದ ಸ್ವಾತಂತ್ರ್ಯವನ್ನು ಪಡೆಯಬೇಕಾಗಿದೆ. ಉಪಗ್ರಹ ತಂತ್ರಜ್ಞಾನದ ಸಾಧನೆಯಲ್ಲಿ ಪ್ರಪಂಚದ ಆರು ರಾಷ್ಟ್ರಗಳಲ್ಲಿ ಭಾರತವು ಒಂದಾಗಿರುವುದು ಹೆಗ್ಗಳಿಕೆಯ ವಿಷಯ. ಭಾರತವನ್ನು ಪ್ರೀತಿಸಬೇಕು. ಹಿರಿಯರಿಗೆ ಗೌರವ ನೀಡಬೇಕು ಎಂದರು.

ಕೇಂದ್ರ ಟ್ಯಾಕ್ಸ್ ಮತ್ತು ಕಸ್ಟಮ್ಸ್‌ನ ವಿಶ್ರಾಂತ ಅಧಿಕಾರಿಗಳು ಮತ್ತು ಅಂತಾರಾಷ್ಟ್ರೀಯ ಕ್ರೀಡಾಪಟುಗಳಾದ ಶ್ರೀ ಎಂ. ಯೋಗೇಂದ್ರರವರು, ದೇಹ ಮತ್ತು ಮನಸ್ಸಿನ ಸದೃಢತೆಗೆ ಕ್ರೀಡಾ ಚಟುವಟಿಕೆಗಳು ಅತ್ಯವಶ್ಯಕ. ವಿದ್ಯಾರ್ಥಿ ದೆಸೆಯಿಂದಲೇ ಯಾವುದಾದರೊಂದು ಕ್ರೀಡಾ ಚಟುವಟಿಕೆಗೆ ಪ್ರತಿದಿನ ಕನಿಷ್ಠ ಒಂದು ಗಂಟೆ ಮೀಸಲಾಗಿರಿಸಿ. ಕ್ರೀಡಾ ಚಟುವಟಿಕೆಯಿಂದ ಮನಸ್ಸು ಹೆಚ್ಚು ಜಾಗೃತಾವಸ್ಥೆಯಲ್ಲಿರುತ್ತದೆ. ಏಕಾಗ್ರತೆ, ಸ್ಮರಣಾ ಶಕ್ತಿ, ಛಲ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳಿ. ಪುಸ್ತಕ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಿ. ದೊಡ್ಡ ಗುರಿ ಮತ್ತು ಕನಸುಗಳೊಂದಿಗೆ ಜೀವನವನ್ನು ನಡೆಸಿ ಎಂದು ಹೇಳಿದರು.

ಪ್ರಾಂಶುಪಾಲರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು, ವ್ಯಕ್ತಿತ್ವ ವಿಕಸನಕ್ಕೆ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ಹೆಚ್ಚು ಸಹಕಾರಿಯಾಗಿವೆ. ಇವುಗಳಿಂದ ಸಂಘಟನಾ ಚಾತುರ್ಯ, ನಾಯಕತ್ವದ ಗುಣ, ವಿಮರ್ಶಾತ್ಮಕ ಮನೋಭಾವ, ವಾಕ್ಚಾತುರ್ಯ, ಧೈರ್ಯ, ಸ್ಥೈರ್ಯ, ನೈತಿಕತೆ ಮತ್ತು ಸೇವಾ ಮನೋಭಾವ ಬೆಳೆಯುತ್ತದೆ. ಈ ಎಲ್ಲಾ ಗುಣಗಳು ನಮ್ಮ ಜೀವನದಲ್ಲಿ ಯಶಸ್ಸು ಸಾಧಿಸಲು ಅತ್ಯಗತ್ಯ. ಈ ಮನೋಭಾವಗಳಿಗೆ ಕ್ರಮವಾಗಿ ಸರ್ ಎಂ. ವಿಶ್ವೇಶ್ವರಯ್ಯ, ಮಹಾತ್ಮ ಗಾಂಧೀಜಿ, ಡಾ. ಬಿ.ಆರ್. ಅಂಬೇಡ್ಕರ್, ಸ್ವಾಮಿ ವಿವೇಕಾನಂದ, ರಾಣಿ ಲಕ್ಷ್ಮೀಬಾಯಿ, ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ನಿದರ್ಶನಪೂರಕವಾಗಿ ನೋಡಬೇಕು. ಕ್ರೀಡೆಯಿಂದ ಪರಸ್ಪರ ವಿಶ್ವಾಸ ಮತ್ತು ನಂಬಿಕೆ ಮೂಡುತ್ತದೆ ಎಂದರು. ಸಾಂಸ್ಕೃತಿಕ ವೇದಿಕೆಯ ಸಂಚಾಲಕರಾದ ಶ್ರೀ ವಿ. ಶಿವ ಮತ್ತು ದೈಹಿಕ ನಿರ್ದೇಶಕರಾದ ಶ್ರೀ ಎಂ. ಕಾರ್ತಿಕ್ ಉಪಸ್ಥಿತರಿದ್ದರು. ವಿದ್ಯಾರ್ಥಿ ಕು. ಆರ್. ಸುಷ್ಮಿತಾ ನಿರೂಪಿಸಿದರು. ಕು. ಸೌಜನ್ಯ ಸ್ವಾಗತಿಸಿದರು. ಕು. ಪ್ರಿಯಾ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಎಸ್.ಎಸ್. ಅನು ವಂದಿಸಿದರು.

## ಪ್ರೊ. ಆರ್.ಎಂ. ಚಿಂತಾಮಣಿಯವರಿಗೆ ಶ್ರದ್ಧಾಂಜಲಿ

ಆರ್ಥಿಕ ಚಿಂತಕರೂ ವಿಶ್ರಾಂತ ಪ್ರಾಧ್ಯಾಪಕರೂ ಆದ ಪ್ರೊ. ಆರ್.ಎಂ. ಚಿಂತಾಮಣಿಯವರು ದೈವಾಧೀನರಾದ ಹಿನ್ನೆಲೆಯಲ್ಲಿ ದಿನಾಂಕ 8.8.2026ರಂದು **ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಡಾ. ಬಿ. ಪ್ರಭುಸ್ವಾಮಿಯವರು ಮಾತನಾಡಿ, ಪ್ರೊ. ಆರ್.ಎಂ. ಚಿಂತಾಮಣಿಯವರು ವಿದ್ಯಾರ್ಥಿ ದೆಸೆಯಿಂದಲೂ ದೇಶದ ಆರ್ಥಿಕ ವ್ಯವಸ್ಥೆಯ ಬಗ್ಗೆ ಗಂಭೀರವಾದ ಆಲೋಚನೆಗಳನ್ನು ಮಾಡಿದವರು. ಅತ್ಯಂತ ಸರಳವಾಗಿ ಆರ್ಥಿಕ ವಿಚಾರಗಳ ಲೇಖನಗಳನ್ನು ಬರೆದು ಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ಜನ ಸಾಮಾನ್ಯರಿಗೂ ಆರ್ಥಿಕ ವಿಚಾರಗಳು ತಿಳಿಯುವಂತೆ ಮಾಡಿದವರು. ಮೂಲತಃ ಬಾಗಲಕೋಟೆ ಜಿಲ್ಲೆಯ ಬೀಳಗಿಯವರಾದ ಶ್ರೀಯುತರನ್ನು ಪರಮಪೂಜ್ಯ ರಾಜೇಂದ್ರ ಶ್ರೀಗಳು ಗುರುತಿಸಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟರು. ಅವರ ಸೇವೆ ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಪ್ರಾರಂಭವಾಯಿತು. ನಂತರ ಚಾಮರಾಜನಗರ, ಕೊಳ್ಳೇಗಾಲದ ಜೆಎಸ್‌ಎಸ್ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ ಮತ್ತೆ 1993ರಲ್ಲಿ ಊಟಿ ರಸ್ತೆಯ ಕಾಲೇಜಿಗೆ ವರ್ಗಾವಣೆಗೊಂಡು ಸುಮಾರು 10ವರ್ಷಗಳ ಕಾಲ ಸೇವೆ



ಸಲ್ಲಿಸಿ 2003ರಲ್ಲಿ ನಿವೃತ್ತರಾದರು. ವೃತ್ತಿಯಿಂದ ನಿವೃತ್ತರಾದರೂ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ಬರವಣಿಗೆಯನ್ನು ಕಡೆ ದಿನಗಳವರೆಗೂ ಮುಂದುವರೆಸಿಕೊಂಡಿದ್ದರು. ಕಡೆಯ ದಿನಗಳವರೆಗೂ ಕಾಲೇಜಿನೊಡನೆ ಆತ್ಮೀಯ ಸಂಬಂಧ ಹೊಂದಿದ್ದರು. ಹಿರಿಯರು ಕಿರಿಯರೆನ್ನದೆ ಎಲ್ಲಾ ಸಿಬ್ಬಂದಿವರ್ಗದವರನ್ನೂ ಪ್ರೀತಿಯಿಂದ ಮಾತನಾಡಿಸಿ ಪ್ರೋತ್ಸಾಹ ನೀಡುತ್ತಿದ್ದರು. ಅವರ ನಿಧನವು ಆರ್ಥಿಕ ಚಿಂತನಾಲೋಕಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಹೇಳಿದರು. ಪ್ರೊ. ಆರ್.ಎಂ. ಚಿಂತಾಮಣಿಯವರ ಆತ್ಮಕ್ಕೆ ಶಾಂತಿ ಕೋರಿ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅಧ್ಯಾಪಕರು, ಅಧ್ಯಾಪಕೇತರರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. □

ಜೆಎಸ್‌ಎಸ್ ವಾರ್ತಾಪತ್ರಕ್ಕೆ ಕಳುಹಿಸುವ
ವರದಿಗಳು ಮತ್ತು ಛಾಯಾಚಿತ್ರಗಳನ್ನು ಕಡ್ಡಾಯವಾಗಿ
varthapathra@jssonline.org ಗೆ ಮಾತ್ರ ಕಳುಹಿಸುವುದು.
ಬೇರೆ ಯಾವುದೇ ಇಮೇಲ್‌ಗೆ ಕಳುಹಿಸಬಾರದು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ
ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
ದೂರವಾಣಿ : 9663151846, 9480771995
8861654566, 9964161363

## ಸಮಾಜದ ಉನ್ನತಿಗೆ ಗುರುಗಳ ಮಾರ್ಗದರ್ಶನ ಮುಖ್ಯ




ಕೊಳ್ಳೇಗಾಲದ ಜೆಎಸ್ಎಸ್ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ನಡೆದ ಗುರುಪೂರ್ಣಿಮಾ ಕಾರ್ಯಕ್ರಮದಲ್ಲಿ ಡಾ. ಮಧುಸೂಧನ್‌ರವರು ಮಾತನಾಡುತ್ತಿರುವುದು. (29 ಜುಲೈ 2026)

ನಮ್ಮ ಬಾಳಿಗೆ ಬೆಳಕಾದ ಗುರುವನ್ನು ನಾವು ಯಾವಾಗಲು ಸ್ಮರಿಸಬೇಕು. ಗುರು ಎಂದರೆ ಗುರಿ ತೋರುವವರು ಸಮಾಜದ ಉನ್ನತಿಗೆ ಗುರುಗಳ ಮಾರ್ಗದರ್ಶನ ಮುಖ್ಯ ಎಂದು ಡಾ. ಮಧುಸೂಧನ್‌ರವರು ಹೇಳಿದರು.

**ಕೊಳ್ಳೇಗಾಲ ಪಟ್ಟಣದ ಜೆಎಸ್ಎಸ್ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ** ಆಯೋಜಿಸಲಾಗಿದ್ದ ಗುರುಪೂರ್ಣಿಮೆ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಅವರು ತಿಳಿಸಿದರು. ನಮ್ಮ ಜೀವನಕ್ಕೆ ಮಾರ್ಗದರ್ಶಕರಾದ ಗುರುಗಳಿಗೆ ಕೃತಜ್ಞತೆ ಸಲ್ಲಿಸುವುದು ಭಾರತೀಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯಾಗಿದೆ. ಜೆಎಸ್ಎಸ್ ಸಂಸ್ಥೆಗೆ ಭವ್ಯ ಪರಂಪರೆಯಿದ್ದು, ನಾಡಿನಾದ್ಯಂತ ಜ್ಞಾನ, ಅನ್ನ, ಅಕ್ಷರ ದಾಸೋಹವನ್ನು ನಡೆಸಿಕೊಂಡು ಬರುತ್ತಾ ಹಲವರ ಬದುಕಿಗೆ ದಾರಿದೀಪವಾಗಿದೆ. ಇಲ್ಲಿ ಕಲಿತವರು ಉನ್ನತ ಬದುಕಿನೆಡೆಗೆ ಸಾಗಬೇಕು. ಕಲಿಸಿದವರನ್ನು ಜೀವನದುದ್ದಕ್ಕೂ ಸ್ಮರಿಸಿಕೊಳ್ಳಬೇಕು. ಅಂತಹ ಸ್ಮರಣೆಯ ಕಾರ್ಯವೇ ಗುರುಪೂರ್ಣಿಮ ಕಾರ್ಯಕ್ರಮವಾಗಿದೆ. ನಮಗೆ ಜ್ಞಾನ, ಸಂಸ್ಕಾರ, ಆಧ್ಯಾತ್ಮಿಕ ಬೆಳವಣಿಗೆಗೆ ದಿಕ್ಕನ್ನು ತೋರುವವರು ನಿಜವಾದ ಗುರುಗಳು. ವ್ಯಕ್ತಿತ್ವ ರೂಪಿಸುವ ಶಿಲ್ಪಿ, ಅಜ್ಞಾನ ಹೋಗಲಾಡಿಸಿ ಜ್ಞಾನ ನೀಡುವ ದಾರಿದೀಪ, ನೀತಿ ಸತ್ಯದ ಮಾರ್ಗದರ್ಶಕ ಗುರು. ಅಂತಹ ಗುರುವಿಗೆ ಕೃತಜ್ಞತೆ ಸಲ್ಲಿಸುವ ದಿನವಿದು ಎಂದು ತಿಳಿಸಿದರು.

ಪ್ರಾಂಶುಪಾಲರಾದ ಶ್ರೀ ಮಹದೇವಸ್ವಾಮಿಯವರು ಮಾತನಾಡಿ, ಗುರುಪೂರ್ಣಿಮೆ ಭಾರತೀಯ ಸಂಸ್ಕೃತಿಯಲ್ಲಿ ಅತ್ಯಂತ ಪವಿತ್ರವಾದ ದಿನವಾಗಿದೆ. ಆಷಾಢಮಾಸದ ಹುಣ್ಣಿಮೆಯಂದು ಗುರುಪೂರ್ಣಿಮೆಯನ್ನು ಆಚರಿಸಲಾಗುತ್ತದೆ. ಈ ದಿನ ಮಹರ್ಷಿ ವೇದ ವ್ಯಾಸರ ಸಂಸ್ಮರಣೆ ದಿನವೆಂದು, ಜನ್ಮದಿನವೆಂದು ಆಚರಿಸಲಾಗುತ್ತಿದೆ.

ಈ ದಿನ ಶಿಷ್ಯರು ತನ್ನ ಗುರುಗಳಿಗೆ ಗೌರವ ಸಲ್ಲಿಸುವ, ಸಂಸ್ಮರಿಸುವ ದಿನವಾಗಿದೆ. ಗುರುವು ಅಜ್ಞಾನ, ಅಂಧಕಾರವನ್ನು ದೂರಮಾಡಿ ಬೆಳಕನ್ನು ನೀಡುವವರು ನಮ್ಮ ವ್ಯಕ್ತಿತ್ವ, ನೈತಿಕ ಮೌಲ್ಯವನ್ನು ರೂಪಿಸುವಲ್ಲಿ ಗುರುಗಳ ಪಾತ್ರ ಅತ್ಯಂತ ಮಹತ್ವವಾದುದು. ಜ್ಞಾನ, ಸಂಸ್ಕಾರ, ಸತ್ಯದ ಕಡೆಗೆ ಕೊಂಡೊಯ್ಯುವ ಬದುಕಿಗೆ ಬೆಳಕನ್ನು ನೀಡುವ ಸತ್ಯ, ಧರ್ಮ, ಜ್ಞಾನದ ಮಾರ್ಗದಲ್ಲಿ ನಡೆಸುವವರೇ ಗುರುಗಳು ಎಂದರು.

ಕಾರ್ಯಕ್ರಮದಲ್ಲಿ ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

## ಸಮಗ್ರ ಚಾಂಪಿಯನ್ ಶಿಪ್ ಪ್ರಶಸ್ತಿ

ಮೈಸೂರು ನಗರ ಅಂತರ ಕಾಲೇಜುಗಳ ಕ್ರೀಡಾಕೂಟದಲ್ಲಿ **ಜೆಎಸ್‌ಎಸ್ ಮಹಿಳಾ ಕಾಲೇಜಿನ** ವಿದ್ಯಾರ್ಥಿನಿಯರು ಭಾಗವಹಿಸಿ ಥ್ರೋಬಾಲ್‌ನಲ್ಲಿ ಪ್ರಥಮ, ಬಾಲ್ ಬ್ಯಾಡ್ಮಿಂಟನ್, ಕಬಡ್ಡಿ ಟೆನ್ನಿಕಾಯ್ಟ್‌ನಲ್ಲಿ ದ್ವಿತೀಯ; ವಾಲಿಬಾಲ್ ತೃತೀಯ ಮತ್ತು ಟೇಬಲ್ ಟೆನ್ನಿಸ್, ಬ್ಯಾಡ್ಮಿಂಟನ್‌ನಲ್ಲಿ ನಾಲ್ಕನೇ ಸ್ಥಾನ ಪಡೆಯುವುದರ ಜೊತೆಗೆ ಸಮಗ್ರ ಚಾಂಪಿಯನ್ ಪ್ರಶಸ್ತಿ ಪಡೆದುಕೊಂಡಿರುತ್ತಾರೆ. ಕ್ರೀಡಾಕೂಟದಲ್ಲಿ ಅತ್ಯುತ್ತಮ ಸಾಧನೆಗೈದಿರುವ ವಿದ್ಯಾರ್ಥಿನಿಯರಿಗೆ ಪ್ರಾಚಾರ್ಯರಾದ ಡಾ. ರೇಚಣ್ಣ, ಕಛೇರಿ ಅಧ್ಯಕ್ಷರಾದ ಶ್ರೀ ಎಸ್. ಶಿವಶಂಕರಪ್ಪ ಹಾಗೂ ಶ್ರೀ ಕೆ.ಎಸ್. ಮೋಹನ್‌ಕುಮಾರ್, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀಮತಿ ಎ. ರಶ್ಮಿ, ಕ್ರೀಡಾ ಕಾರ್ಯದರ್ಶಿಯಾದ ಅಂತಿಮ ಬಿಎಸ್ಸಿ ವಿದ್ಯಾರ್ಥಿನಿ ಕು. ತೇಜಸ್ವಿನಿ ಹಾಗೂ ಕಾಲೇಜಿನ ಅಧ್ಯಾಪಕರು, ಅಧ್ಯಾಪಕೇತರ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.



# ಕಾನೂನಿನ ಅರಿವು ಎಲ್ಲರಿಗೂ ಅವಶ್ಯಕ




ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಪೋಕ್ಸೋ ಕಾಯ್ದೆ ಮತ್ತು ಮಾದಕದ್ರವ್ಯ ದುರ್ಬಳಕೆ ತಡೆಗಟ್ಟುವ ಕುರಿತು ವಸತಿ ಶಾಲೆಯ ಮಕ್ಕಳಿಗೆ ಕಾನೂನು ಅರಿವು ಕಾರ್ಯಕ್ರಮವನ್ನು ಗೌರವಾನ್ವಿತ ಜಿಲ್ಲಾ ನ್ಯಾಯಾಧೀಶರು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀ ಹೆಚ್. ಶಶಿಧರ್ ಶೆಟ್ಟಿಯವರು ಉದ್ಘಾಟಿಸಿದರು. (23 ಆಗಸ್ಟ್ 2026)

ಕಾನೂನಿನ ಅರಿವು ಪ್ರತಿಯೊಬ್ಬರಿಗೂ ಅವಶ್ಯಕ ಎಂದು ಗೌರವಾನ್ವಿತ ಜಿಲ್ಲಾ ನ್ಯಾಯಾಧೀಶರು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಹೆಚ್. ಶಶಿಧರ್ ಶೆಟ್ಟಿಯವವರು ಹೇಳಿದರು.

**ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲಾ** ಮಕ್ಕಳಿಗೆ ದಿನಾಂಕ 23.8.2026ರಂದು ಹಮ್ಮಿಕೊಂಡಿದ್ದ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ಹಕ್ಕುಗಳು, ಕರ್ತವ್ಯಗಳು, ಕಾನೂನಿನ ರಕ್ಷಣೆ ಬಗ್ಗೆ ಎಲ್ಲರೂ ತಿಳಿದುಕೊಳ್ಳಬೇಕು. ಕಾನೂನು ಗೊತ್ತಿಲ್ಲ ಎನ್ನುವುದು ಸಮಸ್ಯೆಗೆ ಪರಿಹಾರವಲ್ಲ, ಕಾನೂನಿನ ಮೂಲಭೂತ ಅರಿವು ಪ್ರತಿಯೊಬ್ಬ ನಾಗರಿಕನಿಗೂ ಅತ್ಯವಶ್ಯಕ. ಕಾನೂನು ಪ್ರಾಧಿಕಾರದ ಮುಖಾಂತರ ಉಚಿತ ಸೇವೆಯನ್ನು ನೀಡಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಯುವಕರು ಡ್ರಗ್ಸ್ ಎಂಬ ಮಾಯಾಜಾಲಕ್ಕೆ ಸಿಲುಕಿ ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಈ ಜಾಲದಿಂದ ವಿದ್ಯಾರ್ಥಿಗಳು ಹೊರಬರಬೇಕು. ನಿಮ್ಮ ಸ್ನೇಹಿತರು ಡ್ರಗ್ಸ್‌ಗೆ ದಾಸರಾಗಿದ್ದರೆ ಅವರನ್ನು ಹೊರ ತರಲು ಪೋಷಕರ ಗಮನಕ್ಕೆ ತರಬೇಕು. ಮಾದಕ ದ್ರವ್ಯ ವಸ್ತುಗಳನ್ನು ಮಾರುವುದು ಅಪರಾಧವಾಗಿದ್ದು, ಇಂತಹ ಸುಳಿವು ಸಿಕ್ಕರೆ 1933 ಕ್ಕೆ ಕರೆ ಮಾಡಿ ದೂರು ನೀಡಬಹುದು. ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸಲು ಪೋಕ್ಸೊ ಕಾಯ್ದೆ ಜಾರಿಯಲ್ಲಿದೆ. ಮಗುವಿಗೆ ಅಸಹಜ ಅಥವಾ ಅಸುರಕ್ಷಿತ ಅನಿಸುವ ಯಾವುದೇ ವರ್ತನೆ ಕಂಡಬಂದರೆ ವಿಶ್ವಾರ್ಹ ಪೋಷಕರು, ಶಿಕ್ಷಕರು ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವುದು ಮುಖ್ಯ. ಮಕ್ಕಳ ಬಾಲ್ಯವು

ಶಿಕ್ಷಣ, ಆಟ, ಕನಸು ಮತ್ತು ಅಭಿವೃದ್ಧಿಗಾಗಿ ಇರಬೇಕು, ಮದುವೆಗಾಗಿ ಅಲ್ಲ. ಹೆಣ್ಣಿಗೆ 18 ಮತ್ತು ಗಂಡಿಗೆ 21 ವಯಸ್ಸಾಗಿದ್ದರೆ ಮಾತ್ರ ಕಾನೂನಿನ ಪ್ರಕಾರ ಮದುವೆಗೆ ಅರ್ಹರು. ಬಾಲ್ಯ ವಿವಾಹ ಕಾಯ್ದೆಯ ಅರಿವು ಎಲ್ಲರಿಗೂ ಇರಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮೈಸೂರಿನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ನಾಗರಾಜ ಸಿದ್ದಪ್ಪ ಅಂಕಸದೊಡ್ಡಿಯವರು, ಸಹಾಯಕ ಸಂಯೋಜನಾಧಿಕಾರಿಗಳಾದ ಶ್ರೀ ವೀರಭದ್ರಯ್ಯ ಉಪಸ್ಥಿತರಿದ್ದರು. ಅಧೀಕ್ಷಕರಾದ ಶ್ರೀ ಮಹದೇವಪ್ರಸಾದ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

## ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಗಳ ಅಂತಶ್ಶಕ್ತಿ



ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಗಳ ಶಕ್ತಿ ಎಂದು ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದ ನಿಕಟಪೂರ್ವ ಕುಲಪತಿಗಳು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರಾಧ್ಯಾಪಕರಾದ ಡಾ. ನಿರಂಜನ್ ವಾನಳ್ಳಿಯವರು ಹೇಳಿದರು.

**ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 25.8.2026ರಂದು ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ಜನರು ಪ್ರಸ್ತುತ ನಗರ ಪ್ರದೇಶದತ್ತ ಮುಖ ಮಾಡುತ್ತಿದ್ದಾರೆ. ಆದರೆ ಗ್ರಾಮೀಣ ಪ್ರದೇಶದ ಬದುಕು ನೆಮ್ಮದಿಯ ಬದುಕಾಗಿದೆ. ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ ಮುಖ್ಯ. ವಿದ್ಯಾಭ್ಯಾಸದ ಕಡೆ ಹೆಚ್ಚಿನ ಗಮನ ನೀಡುವುದರ ಜೊತೆಗೆ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ಎಲ್ಲರ ಬದುಕಿನ ಭಾಗವಾಗಬೇಕು. ಅದು

ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಅತ್ಯಗತ್ಯ. ಕೇವಲ ಅಂಕ ಗಳಿಸುವುದಷ್ಟೇ ಜೀವನವಲ್ಲ. ಕಲೆ ಮತ್ತು ಕ್ರೀಡೆಗಳು ಮನಸ್ಸನ್ನು ಸದಾ ಉತ್ಸಾಹದಿಂದ ಇಡುತ್ತವೆ ಎಂದು ತಿಳಿಸಿದರು.

ರಾಷ್ಟ್ರೀಯ ಥ್ರೋಬಾಲ್ ಹಾಗೂ ಬಾಸ್ಕೆಟ್ ಬಾಲ್ ಆಟಗಾರ್ತಿ ಮೈಸೂರಿನ ಶ್ರೀಮತಿ ಬಿಂದಿಯಾ ಗುರುಸ್ವಾಮಿಯವರು ಮಾತನಾಡಿ, ನಾನು ಜೆಎಸ್‌ಎಸ್ ಸಂಸ್ಥೆಯ ಹಿರಿಯ ವಿದ್ಯಾರ್ಥಿಯಾಗಿದ್ದು ನನ್ನ ಸಾಧನೆಗೆ ತಂದೆ, ತಾಯಿ, ಗುರುಗಳ ಹಾಗೂ ಜೆಎಸ್‌ಎಸ್ ಸಂಸ್ಥೆಯ ಸಹಕಾರವಿದೆ. ಜೆಎಸ್‌ಎಸ್ ಸಂಸ್ಥೆಯು ವಿದ್ಯಾರ್ಥಿಗಳ ಪ್ರತಿಭೆಯನ್ನು ಪ್ರೋತ್ಸಾಹಿಸಲು ಸದಾ ಸಿದ್ಧವಿದೆ. ಪುಸ್ತಕದ ಜ್ಞಾನದ ಜೊತೆಗೆ ಕಲೆ ಹಾಗೂ ಕ್ರೀಡೆಗಳು ಮುಖ್ಯ. ಅವು ಮಾನವೀಯತೆ ಮತ್ತು ಸೃಜನಶೀಲತೆಯನ್ನು ಬೆಳೆಸುತ್ತವೆ. ಆದ್ದರಿಂದ ಮುಂಬರುವ ದಿನಗಳಲ್ಲಿ ವಿದ್ಯಾರ್ಥಿಗಳು ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಸಿದ್ಧರಾಗಬೇಕು ಎಂದರು.

ಹಿರಿಯ ಪ್ರಾಧ್ಯಾಪಕರು ಹಾಗೂ ಮೈಸೂರು ವಿಶ್ವವಿದ್ಯಾನಿಲಯ ನಿಕಟಪೂರ್ವ ಮೌಲ್ಯಮಾಪನ ಕುಲಸಚಿವರಾದ ಡಾ. ಎನ್. ನಾಗರಾಜುರವರು ಮಾತನಾಡಿ, ಸಂಸ್ಕೃತಿ ಎಂದರೆ ಕೇವಲ ಹಬ್ಬ–ಹರಿದಿನಗಳಲ್ಲ, ಅದು ನಮ್ಮ ಜೀವನ ವಿಧಾನ. ಕಲೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ನಮ್ಮ ದೇಶದ ಭವ್ಯ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಮಾಧ್ಯಮಗಳು. ಕ್ರೀಡೆ ಮತ್ತು ಸಾಂಸ್ಕೃತಿಕ ವೇದಿಕೆಯು ವಿದ್ಯಾರ್ಥಿಗಳನ್ನು ಡಿಜಿಟಲ್ ಪ್ರಪಂಚದಿಂದ ಹೊರತಂದು, ನಿಜವಾದ ಮೈದಾನ ಮತ್ತು ವೇದಿಕೆಯ ಮೇಲೆ ತಮ್ಮ ಶಕ್ತಿಯನ್ನು ಪ್ರದರ್ಶಿಸಲು ಇರುವ ಸುವರ್ಣ ಅವಕಾಶವಾಗಿದೆ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಡಾ. ಹೆಚ್.ಎಸ್. ಕೊಂಗಳಪ್ಪ ಮಾತನಾಡಿ, ಕಲೆ ಮತ್ತು ಸಂಸ್ಕೃತಿ ಜೀವನದ ಒಂದು ಭಾಗ. ವಿದ್ಯಾರ್ಥಿಗಳಲ್ಲಿ ಅಡಗಿರುವ ಕ್ರೀಡಾ ಮತ್ತು ಕಲಾ ಪ್ರತಿಭೆಯನ್ನು ಗುರುತಿಸಬೇಕು. ಶಿಕ್ಷಣದ ಜೊತೆಗೆ ಪಠ್ಯೇತರ ಚಟುವಟಿಕೆಗಳು ದೇಹ ಹಾಗೂ ಮನಸ್ಸಿನ ವಿಕಾಸಕ್ಕೆ ಮುಖ್ಯ ವಾಗಿದೆ. ಜೀವನದಲ್ಲಿ ಗೆಲವು ಮುಖ್ಯವಲ್ಲ. ಸ್ಪರ್ಧೆಗಳಲ್ಲಿ ಭಾಗವಹಿಸುವಿಕೆ ಮುಖ್ಯವಾಗಿದೆ. ಜೀವನದಲ್ಲಿ ಸೋತಾಗ ಮುನ್ನಡೆಯುವ ಶಕ್ತಿಯನ್ನು ನಮಗೆ ಕ್ರೀಡೆ ನೀಡುತ್ತದೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಶ್ರೀಮತಿ ಆರ್.ಪಿ. ಸೌಮ್ಯ ಹಾಗೂ ಶ್ರೀ ಶ್ರೀಧರ್ ಉಪಸ್ಥಿತರಿದ್ದರು.

□

**ಮಾಸಿಕ ಸಾಮೂಹಿಕ ವಿವಾಹ 2026**

**ಸುತ್ತೂರು ಶ್ರೀಕ್ಷೇತ್ರ**





**ಅಕ್ಟೋಬರ್ 14 ಬುಧವಾರ**

**ವಿವರಗಳಿಗೆ ಸಂಪರ್ಕಿಸಿ :**
**ಆಡಳಿತಾಧಿಕಾರಿಗಳು**
**ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು**
**ದೂರವಾಣಿ : 08221–232223, 232224**

## ಜ್ಞಾನ ಹಾಗೂ ಆಧ್ಯಾತ್ಮಿಕತೆಯ ನೆಲೆ ಸುತ್ತೂರು ಶ್ರೀಮಠ

ಜ್ಞಾನದ ಜೊತೆಗೆ ಆಧ್ಯಾತ್ಮಿಕತೆಯನ್ನು ಕಲಿಸುವ ತಾಣ ಶ್ರೀ ಸುತ್ತೂರು ಮಠ ಎಂದು ಟಿವಿಎಸ್ ಮೋಟಾರ್ ಕಂಪನಿಯ ಗೌರವ ಅಧ್ಯಕ್ಷರಾದ ಶ್ರೀ ವೇಣು ಶ್ರೀನಿವಾಸನ್‌ರವರು ಹೇಳಿದರು.

ಸುತ್ತೂರು ಶ್ರೀಕ್ಷೇತ್ರಕ್ಕೆ ದಿನಾಂಕ 20.8.2026ರಂದು ಆಗಮಿಸಿದ್ದ ಶ್ರೀಯುತರು ಪ್ರಾರ್ಥನಾ ಸಭೆಯಲ್ಲಿ ಪಾಲ್ಗೊಂಡು ಜೆಎಸ್‌ಎಸ್ ವಸತಿ ಶಾಲೆಯ ಸಹಸ್ರಾರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಅತ್ಯಂತ ಪ್ರಾಚೀನ ಮಠಗಳಲ್ಲಿ ಒಂದಾದ ಶ್ರೀ ಸುತ್ತೂರು ಮಠಕ್ಕೆ ಬಂದಿರುವುದು ನನ್ನ ಪುಣ್ಯ, ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಾತಿ, ಮತ, ಭೇದವಿಲ್ಲದೆ ವಿವಿಧ ಜಿಲ್ಲೆ, ರಾಜ್ಯಗಳಿಂದ ಬಂದಿರುವಂತಹ ಸಹಸ್ರಾರು ಮಕ್ಕಳಿಗೆ ವಸತಿ, ಶಿಕ್ಷಣವಷ್ಟೇ ಅಲ್ಲದೆ, ಪರಿಪೂರ್ಣ ಜೀವನಕ್ಕೆ ಅತ್ಯವಶ್ಯವಾದ ಶಿಸ್ತು, ಸಂಸ್ಕಾರವನ್ನು ಕೊಟ್ಟು ಸಮಾಜಕ್ಕೆ ಉತ್ತಮ ಪ್ರಜೆಗಳನ್ನಾಗಿ ರೂಪಿಸಲಾಗುತ್ತಿದೆ. ದೇಶ ವಿದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಗುಣಾತ್ಮಕ ಶಿಕ್ಷಣವನ್ನು ನೀಡುವ ಮೂಲಕ ಶ್ರೀ ಸುತ್ತೂರು ಮಠವು ಸಮಾಜಕ್ಕೆ ಅನನ್ಯ ಕೊಡುಗೆಗಳನ್ನು ನೀಡುತ್ತಿದೆ. ಸತತ ಪರಿಶ್ರಮದಿಂದ ಶಿಕ್ಷಣವನ್ನು ಪಡೆದು ದೇಶಕ್ಕೆ ಏನಾದರೂ ಕೊಡುಗೆ ನೀಡುವಂತ ಪ್ರಜ್ಞಾವಂತ ಪ್ರಜೆಗಳಾಗಬೇಕು ಎಂದು ವಿದ್ಯಾರ್ಥಿಗಳಿಗೆ ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡಿ, ಶ್ರೀ ವೇಣು ಶ್ರೀನಿವಾಸನ್‌ರವರು ಸರಳ ಸಜ್ಜನಿಕೆಯ ವ್ಯಕ್ತಿತ್ವ ಉಳ್ಳವರು. ಜನಸಾಮಾನ್ಯರಂತೆ ವೇಷಭೂಷಣದಲ್ಲಿ ಸರಳವಾಗಿ ಕಂಡರೂ ಜಗತ್ತಿನ ವಿಖ್ಯಾತ ಉದ್ಯಮಿಗಳಲ್ಲಿ ಒಬ್ಬರಾಗಿದ್ದಾರೆ. ಭಾರತ ದೇಶದಲ್ಲಿ ಸುಮಾರು ನೂರು ವರ್ಷಗಳ ಹಿಂದೆ ಅವರ ತಾತನವರಾದ ಟಿ.ವಿ. ಸುಂದರಂ ಅಯ್ಯಂಗಾರ್ ರವರು ಟಿವಿಎಸ್ ಕಂಪನಿಯನ್ನು ಪ್ರಾರಂಭಿಸಿದರು. ಭಾರತ ಅಷ್ಟೆ ಅಲ್ಲದೆ ಇಂಡೋನೇಷಿಯಾ, ಇಂಗ್ಲೆಂಡ್, ಅಮೇರಿಕಾ ಮತ್ತು ಇತರೆ ದೇಶಗಳಲ್ಲಿ ಕಂಪನಿಗಳನ್ನು ಸ್ಥಾಪಿಸಿದ್ದಾರೆ. ದೇಶದ ಹಿತಕ್ಕಾಗಿ ಸಂಕಲ್ಪ ಉಳ್ಳವರಾಗಿದ್ದಾರೆ. ಬೃಹದಾಕಾರವಾಗಿ ಬೆಳೆದು ಪ್ರಪಂಚದ ಪ್ರತಿಷ್ಠಿತ ಕಂಪೆನಿಗಳಲ್ಲಿ ಟಿ.ವಿ.ಎಸ್ ಒಂದಾಗಿದೆ. ಹಲವಾರು ದೇವಸ್ಥಾನಗಳ ಸ್ಥಾಪನೆ ಮತ್ತು ಜೀರ್ಣೋದ್ಧಾರ ಕಾಯಕದಲ್ಲೂ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ. ಸದಾ ಸರ್ವರ ಹಿತವನ್ನು ಬಯಸುವವರು 2010ರಲ್ಲಿ ಪದ್ಮಶ್ರೀ, 2020ರಲ್ಲಿ ಪದ್ಮಭೂಷಣ ಪುರಸ್ಕಾರಗಳನ್ನು ಮುಡಿಗೇರಿಸಿಕೊಂಡಿದ್ದಾರೆ. ವಿದೇಶಗಳಿಂದಲೂ ಅನೇಕ ಪ್ರಶಸ್ತಿಗಳು ಲಭಿಸಿವೆ ಎಂದರು.

ಕಾರ್ಯಕ್ರಮದಲ್ಲಿ ಮಹಾವಿದ್ಯಾಪೀಠದ ಅಧಿಕಾರಿಗಳು, ಊಟಿ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಧನಪಾಲ್, ಟಿ.ವಿ.ಎಸ್ ಕಂಪನಿಯ ಅಧಿಕಾರಿಗಳಾದ ಶ್ರೀ ಜಯಣ್ಣ, ಶ್ರೀ ಶಾಂತಮಲ್ಲಪ್ಪ, ಶ್ರೀಧರ್, ಬಿಲ್ಡರ್ ಆದ ಶ್ರೀ ಮಂಜುನಾಥ್ ಶ್ರಾಫ್, ಸ್ಥಪತಿಗಳಾದ ಶ್ರೀ ಶಂಕರ್, ಆಗಮಿಕರಾದ ಡಾ. ಮಲ್ಲಣ್ಣ, ಸಂಸ್ಥೆಗಳ ಮುಖ್ಯಸ್ಥರುಗಳು ಹಾಗೂ ಇತರರು ಉಪಸ್ಥಿತರಿದ್ದರು. ಸಹಾಯಕ ಆಡಳಿತಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

ಆತ್ಮ ಲಿಂಗ ಪರಮಾತ್ಮ ಜಂಗಮ
ತನು ಮಧ್ಯೆ ಪ್ರಸಾದವಾಯಿತ್ತು
ನಿಶ್ಚಿಂತ ನಿವಾಸವಾಯಿತ್ತು
ಕೂಡಲಸಂಗನ ಶರಣರ ಸಂಗದಿಂದ
ನಿಶ್ಚಿಂತ ನಿವಾಸವಾಯಿತ್ತು

– ಬಸವಣ್ಣ

## ಕ್ರೀಡಾ ಸಾಧನೆ



ಮೈಸೂರು ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಬಾಲಕರ ಕಬಡ್ಡಿ ತಂಡವು ಇತ್ತೀಚೆಗೆ ನಡೆದ ತಾಲ್ಲೂಕು ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡಿದೆ. ಜಯಲಕ್ಷ್ಮೀಪುರಂನ ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ತಾಲ್ಲೂಕು ಮಟ್ಟದ ಪದವಿಪೂರ್ವ ಕಾಲೇಜುಗಳ ಬಾಲಕರ ಕಬಡ್ಡಿ ಪಂದ್ಯಾವಳಿಯಲ್ಲಿ ಒಟ್ಟು 24 ತಂಡಗಳು ಭಾಗವಹಿಸಿದ್ದವು. ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡಿ ದ್ವಿತೀಯ ಪ್ರಶಸ್ತಿ ಗಳಿಸುವುದರೊಂದಿಗೆ ಕಾಲೇಜಿಗೆ ಕೀರ್ತಿತಂದ ಕ್ರೀಡಾಪಟುಗಳನ್ನು ಜೆಎಸ್‌ಎಸ್ ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಚ್.ಪಿ. ಮಹದೇವಸ್ವಾಮಿ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಟಿ. ಅರವಿಂದ್ ಅಭಿನಂದಿಸಿದ್ದಾರೆ.

ಜೆಎಸ್‌ಎಸ್ ಮಹಾವಿದ್ಯಾಪೀಠ

ಜೆಎಸ್‌ಎಸ್ ಗ್ರಂಥಮಾಲೆಯ ಪ್ರಕಟಣೆಯ ಪುಸ್ತಕಗಳನ್ನು

ಆನ್‌ಲೈನ್‌ನಲ್ಲಿಯೂ ಖರೀದಿಸಿ




ಕೆಳಗಿನ ಪ್ಲಾಟ್‌ಫಾರ್ಮ್‌ಗಳಲ್ಲಿ ಲಭ್ಯ

Google Play Books | Flipkart | amazon | WhatsApp




WhatsApp ಮೂಲಕ ಖರೀದಿಸಲು ಸಂಪರ್ಕಿಸಿ

89048 38909

# ಶ್ರಾವಣಮಾಸ ಹಿಂದೂಗಳಿಗೆ ಪವಿತ್ರವಾದುದು




ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀಮತಿ ಎಂ.ಎಸ್. ಅರ್ಚನಾರವರು ಉದ್ಘಾಟಿಸಿದರು. ವಿದ್ವಾನ್ ಡಾ. ಮೈಸೂರು ಮಂಜುನಾಥ್, ಶ್ರೀಮತಿ ಆರ್. ಐಶ್ವರ್ಯ, ಹಂಚೀಪುರದ ಶ್ರೀ ಪಟ್ಟದ ಮಠದ ಶ್ರೀ ತೋಂಟದಾರ್ಯ ಸ್ವಾಮಿಗಳವರಿದ್ದಾರೆ. (12 ಆಗಸ್ಟ್ 2026)

ಶ್ರಾವಣಮಾಸವು ಹಿಂದೂಗಳ ಪವಿತ್ರ ಮಾಸವಾಗಿದೆ ಎಂದು ಮೈಸೂರಿನ ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಆರ್. ಐಶ್ವರ್ಯರವರು ಹೇಳಿದರು.

ಸುತ್ತೂರು ಶ್ರೀಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 12.8.2026ರಂದು ನಡೆದ ಶ್ರಾವಣ ಮಾಸ ಪ್ರವಚನದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಾವೆಲ್ಲರೂ ಇಲ್ಲಿ ಭಾಗವಹಿಸಿರುವುದು ಪುಣ್ಯ ವಿಶೇಷ. ಇದು ಅನುಭವ ಮಂಟಪದ ನೆನಪನ್ನು ತರುತ್ತಿದೆ. ಸುತ್ತೂರು ಶ್ರೀಮಠವು ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಿಗೆ ಅನನ್ಯ ಕೊಡುಗೆಯನ್ನು ನೀಡುತ್ತಾ ಬಂದಿದೆ. ವಿದ್ಯಾರ್ಥಿಗಳು ನಿರ್ದಿಷ್ಟ ಗುರಿಯನ್ನು ಹೊಂದಿರಬೇಕು ಹಾಗೂ ದೇಶ ಕಟ್ಟುವ ಕೆಲಸದಲ್ಲಿ ಭಾಗವಹಿಸಬೇಕು. ಶ್ರೀಮಠವು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದೆ ಎಂದರು.

ಮೈಸೂರಿನ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಎಂ.ಎಸ್.

ಅರ್ಚನರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸುತ್ತೂರು ಶ್ರೀಮಠವು ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವುದರ ಮೂಲಕ ಭಾರತದ ಸಂಸ್ಕೃತಿ ಮತ್ತು ಪರಂಪರೆಯನ್ನು ಶ್ರೀಮಂತಗೊಳಿಸುತ್ತಿದೆ. ಶ್ರಾವಣ ಮಾಸದ ಸಂದರ್ಭದಲ್ಲಿ ಸದ್ವಿಚಾರಗಳನ್ನು ಕೇಳುವುದರಿಂದ ನಮ್ಮ ಜೀವನವು ಪಾವನವಾಗುತ್ತದೆ ಎಂದು ನುಡಿದರು.

ವಿದ್ವಾನ್ ಡಾ. ಮೈಸೂರು ಮಂಜುನಾಥ್‌ರವರು, ಶ್ರಾವಣ ಮಾಸದಿಂದ ಹಿಂದೂ ಹಬ್ಬಗಳು ಪ್ರಾರಂಭವಾಗುತ್ತವೆ. ಈ ಮಾಸದಲ್ಲಿ ಶಿವನ ಕುರಿತು ಪ್ರವಚನಗಳನ್ನು ಆಲಿಸಿದರೆ ಇಷ್ಟಾರ್ಥಗಳು ನೆರವೇರುತ್ತವೆ. ಚಿಕ್ಕಮಕ್ಕಳಿಂದ ಹಿರಿಯರವರೆಗೆ ಪ್ರವಚನವನ್ನು ಕೇಳಬಹುದಾಗಿದೆ. ಇದು ಪ್ರೀತಿ, ವಿಶ್ವಾಸ, ಸಹಬಾಳ್ವೆ ಹಾಗೂ ಭಕ್ತಿಯನ್ನು ಬೆಳಸುತ್ತದೆ ಎಂದು ಹೇಳಿದರು.

ಸಮ್ಮುಖ ವಹಿಸಿದ್ದ ಸರಗೂರು ತಾಲ್ಲೂಕು ಹಂಚಿಪುರ ಶ್ರೀ ಪಟ್ಟದ ಮಠದ ಶ್ರೀ ತೋಂಟದಾರ್ಯ ಸ್ವಾಮಿಗಳು, ಸುತ್ತೂರು ಶ್ರೀಮಠವು ಅನೇಕ ದಶಕಗಳಿಂದ ಪ್ರವಚನ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಪ್ರವಚನವನ್ನು ಆಲಿಸಿ ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕು ಎಂದರು.

ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ತ್ವ ಚಿಂತಾಮಣಿ' ಕೃತಿಯ ಪ್ರವಚನವನ್ನು ಜೆಎಸ್‌ಎಸ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಹೆಚ್.ಬಿ. ದೇವಣ್ಣನವರು ಆರಂಭಿಸಿದರು. ಕಾರ್ಯಕ್ರಮದಲ್ಲಿ ಗುರುಕುಲದ ಸಾಧಕರು, ಜೆಎಸ್‌ಎಸ್ ಸಂಸ್ಥೆಗಳ ಅಧಿಕಾರಿ ವರ್ಗದವರು, ಸುತ್ತೂರು ಹಾಗೂ ಸುತ್ತಮುತ್ತಲ ಗ್ರಾಮಗಳ ಭಕ್ತರು ಭಾಗವಹಿಸಿದ್ದರು.

ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಎಂ.ಜಿ. ಬಸವಣ್ಣ ಸ್ವಾಗತಿಸಿದರು. ಶ್ರೀ ಎಸ್. ಚಂದ್ರಮೌಳೇಶ್ವರ ವಂದಿಸಿದರು. ಶ್ರೀ ಹೆಚ್.ಎಂ. ದಯಾನಂದಸ್ವಾಮಿ ನಿರೂಪಿಸಿದರು.

## ಸದ್ಗುಣಗಳನ್ನು ಅಳವಡಿಸಿಕೊಳ್ಳಲು ಶ್ರಾವಣ ಅತ್ಯಂತ ಪ್ರಶಸ್ತ

ಜೀವನದಲ್ಲಿ ಸದ್ಗುಣಗಳನ್ನು ಅಳವಡಿಸಿಕೊಳ್ಳಲು ಶ್ರಾವಣ ಮಾಸ ಅತ್ಯಂತ ಪ್ರಶಸ್ತವಾದುದು ಎಂದು ಮೈಸೂರು ಉಪ ಪೊಲೀಸ್ ಆಯುಕ್ತರಾದ ಡಾ. ಹರ್ಷ ಪ್ರಿಯಂವದರವರು ಹೇಳಿದರು.

ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರಾವಣ ಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ದಿನಾಂಕ 13.8.2026ರಂದು ಉದ್ಘಾಟಿಸಿ ಅವರು ಮಾತನಾಡಿದರು. ಶ್ರಾವಣ ಮಾಸ ಭಾರತೀಯರಿಗೆ ಅತ್ಯಂತ ವಿಶೇಷವಾದ ತಿಂಗಳು. ನನ್ನ ಮೂಲಸ್ಥಳ ಜಾರ್ಖಂಡ್‌ದಲ್ಲಿಯೂ ಕೂಡ ಈ ಮಾಸವನ್ನು ಅತ್ಯಂತ ಶ್ರದ್ಧೆ, ಭಕ್ತಿ ಮತ್ತು ಉತ್ಸಾಹಗಳಿಂದ ಆಚರಿಸಲಾಗುತ್ತದೆ. ಭಾರತೀಯರಲ್ಲಿ ಸಂಸ್ಕೃತಿ, ಪರಂಪರೆ ಮತ್ತು ಆಚರಣೆಗಳಲ್ಲಿ ಭಿನ್ನತೆಗಳು ಕಂಡುಬಂದರೂ ಎಲ್ಲರ ಗುರಿ ಒಂದೇ ಆಗಿದೆ. ಅದು ಭಗವಂತನಲ್ಲಿ ಶರಣಾಗತಿಯನ್ನು ಹೊಂದುವುದಾಗಿದೆ. ನಮ್ಮಲ್ಲಿರುವ ಕೆಟ್ಟ ಆಲೋಚನೆಗಳನ್ನು ತೊಡೆದುಹಾಕಿ ಉತ್ತಮ ವಿಚಾರಗಳನ್ನು ಅಳವಡಿಸಿಕೊಳ್ಳಲು ಈ ಮಾಸ ಸಹಾಯಕವಾಗಲಿದೆ ಎಂದು ತಿಳಿಸಿದರು.

ಮೈಸೂರು ಮಹಾನಗರಪಾಲಿಕೆ ಆಯುಕ್ತರಾದ ಶ್ರೀಮತಿ ಎಂ.ಕೆ. ಸವಿತಾರವರು, ಮನುಷ್ಯ ಇಂದು ಒತ್ತಡದಲ್ಲಿ

ಜೀವಿಸುತ್ತಿದ್ದಾನೆ. ಅದರಿಂದ ಹೊರಬರಲು ಶ್ರಾವಣ ಮಾಸದಲ್ಲಿ ಆಯೋಜಿಸುವ ಪ್ರವಚನಗಳು ಸಹಕಾರಿಯಾಗಲಿವೆ. ಮಠಗಳಲ್ಲಿ ನೆರವೇರುವ ಆಧ್ಯಾತ್ಮಿಕ ಕಾರ್ಯಕ್ರಮಗಳು ಸಮಾಜದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಧ್ಯಾನ, ಆಧ್ಯಾತ್ಮಿಕತೆ ಹಾಗೂ ಭಕ್ತಿಯ ಭಾವನೆಗಳನ್ನು ದೈನಂದಿನ ಜೀವನದಲ್ಲಿ ಅವಳವಡಿಸಿಕೊಳ್ಳಬೇಕು. ಶ್ರಾವಣ ಮಾಸ ಮುಂದಿನ ಯೋಜನೆಗಳಿಗೆ ಮತ್ತು ಉತ್ತಮ ಸಿದ್ಧಿ ಸಾಧನೆಗೆ ಅತ್ಯಂತ ಪವಿತ್ರವಾದುದಾಗಿದೆ. ಇಂತಹ ಸತ್ಸಂಗಗಳು ನನಗೂ ಸಹ ಸಾಕಷ್ಟು ಮನೋಬಲವನ್ನು ನೀಡಿವೆ. ಧೈರ್ಯದಿಂದ ಕರ್ತವ್ಯವನ್ನು ನಿರ್ವಹಿಸಲು ಸಹಾಯ ಮಾಡಿವೆ ಎಂದರು.

ಮೇಲುಕೋಟೆ ಶ್ರೀ ವಂಗೀಪುರ ನಂಬಿ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿಯವರು ಒಳ್ಳೆಯದನ್ನು ಕೇಳಿದರೆ ಒಳ್ಳೆಯದೇ ಆಗುತ್ತದೆ. ಶ್ರಾವಣಮಾಸ ಪೂರ್ತಿ ಇಲ್ಲಿ ಆಲಿಸುವ ಮಾತುಗಳನ್ನು ಮನನ ಮಾಡಬೇಕು ಮತ್ತು ಅವನ್ನು ಜೀವನದಲ್ಲಿ ಅಳವಡಿಸಿಕೊಂಡು ಅದರಂತೆ ನಡೆಯಬೇಕು. ಸುತ್ತೂರು ಶ್ರೀಮಠ ಮಾಡುವ ಇಂತಹ ಕಾರ್ಯಗಳು ಸಾರ್ವಕಾಲಿಕವಾದವು ಎಂದು ಹೇಳಿದರು.

ಡಾ. ಕೆ. ಅನಂತರಾಮುರವರು, ಶ್ರಾವಣಕ್ಕೂ–ಶ್ರವಣಕ್ಕೂ ಅವಿನಾಭಾವ ಸಂಬಂಧವಿದೆ. ಈ ಮಾಸದಲ್ಲಿ ಸದ್ವಿಚಾರಗಳ ಚಿಂತನೆ ಮಾಡಿದರೆ ಸಾಲದು, ಬದುಕಿನಲ್ಲಿ ಅವುಗಳನ್ನು ಅಳವಡಿಸಿಕೊಳ್ಳಬೇಕು. ಸುಸಂಸ್ಕೃತರಾಗಿ ಬೆಳೆಯಲು ಇಂತಹ ಸತ್ಸಂಗಗಳು, ಪ್ರವಚನಗಳು ನಡೆಯುತ್ತಲೇ ಇರಬೇಕು. ಇದರಿಂದ ಚಿತ್ತಶುದ್ಧಿಯಾಗುತ್ತದೆ ಮತ್ತು ಏಕಾಗ್ರತೆ ಹೆಚ್ಚುತ್ತದೆ. ಇಂದು ಪೀಳಿಗೆಯಿಂದ ಪೀಳಿಗೆಗೆ ಬುದ್ಧಿ ಬೆಳೆಯುತ್ತಿದೆ, ಆದರೆ ವಿವೇಕ ಬೆಳೆಯುತ್ತಿಲ್ಲ. ಶಾಲಾ–ಕಾಲೇಜುಗಳಲ್ಲಿ ಸರಿಯಾದ ನೈತಿಕ ಶಿಕ್ಷಣ ದೊರೆಯುತ್ತಿಲ್ಲ. ಇಂದಿನ ಮಕ್ಕಳು ಕೇವಲ ಅಂಕದಾಹಕ್ಕೆ ಸಿಲುಕಿದ್ದಾರೆ. ಯುವಜನರು ಇಂತಹ ಪ್ರವಚನ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳಬೇಕು. ಬದುಕು ಉತ್ತಮ ಮೌಲ್ಯಗಳಿಂದ ರೂಪುಗೊಳ್ಳಬೇಕು. ಶ್ರಾವಣಮಾಸ ಭಕ್ತಿಯ ಬೀಜಗಳನ್ನು ಬಿತ್ತುವ ಕಾಲ. ಯಾವುದೇ ಕಾರ್ಯವನ್ನು ಶ್ರದ್ಧೆ ಮತ್ತು ಭಕ್ತಿಯಿಂದ ನಿರಂತರವಾಗಿ ಮಾಡುವುದೇ ಅನುಷ್ಠಾನ. ಅಂತಹ ಅನುಷ್ಠಾನ ಶ್ರೀಮಠದಲ್ಲಿ ಹಲವಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಅದಕ್ಕೆ ಸಾವಿರಪಟ್ಟು ವೇಗವನ್ನು ನೀಡಿದ್ದಾರೆ ಎಂದು ಹೇಳಿದರು.

ಪ್ರೊ. ಮೊರಬದ ಮಲ್ಲಿಕಾರ್ಜುನರವರು ಸ್ವಾಗತಿಸಿದರು. ಶ್ರೀ ಎನ್.ಆರ್. ಶಿವಕುಮಾರ್ ವಂದಿಸಿದರು. ಶ್ರೀ ಕುಮಾರಸ್ವಾಮಿ ವಿರಕ್ತಮಠ ಕಾರ್ಯಕ್ರಮ ನಿರೂಪಿಸಿದರು. ಜೆಎಸ್‌ಎಸ್ ಲಲಿತಕಲಾ ವೃಂದದವರು ಪ್ರಾರ್ಥಿಸಿದರು. ಮೈಸೂರಿನ ಶ್ರೀ ಸುತ್ತೂರು ಮಠದ ಸಿಬ್ಬಂದಿವರ್ಗದವರು ಸೇವಾರ್ಥ ನೆರವೇರಿಸಿದರು.

□

ಭಕ್ತಿಯೆಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು
ಆಚಾರವೆಂಬ ಕಾಯಾಯಿತ್ತು
ನಿಷ್ಪತ್ತಿಯೆಂಬ ಹಣ್ಣು
ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ
ತನಗೆ ಬೇಕೆಂದು ಎತ್ತಿಕೊಂಡ

**ಬಸವಣ್ಣ**

## ಪೌಷ್ಟಿಕ ಕೈದೋಟ : ತರಬೇತಿ ಹಾಗೂ ಕಿಟ್‌ಗಳ ವಿತರಣೆ

ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ನಂಜನಗೂಡಿನ ಧಾನ್ ಫೌಂಡೇಶನ್‌ರವರ ಸಹಯೋಗದೊಂದಿಗೆ ಟಿಎಸ್‌ಪಿ ಯೋಜನೆಯಡಿಯಲ್ಲಿ ರೈತ ಮಹಿಳೆಯರಿಗೆ ಪೌಷ್ಟಿಕ ಭದ್ರತೆಗಾಗಿ ಕೈತೋಟದ ನಿರ್ಮಾಣ, ನಿರ್ವಹಣೆ ತರಬೇತಿ ಹಾಗೂ ಸಿಡ್ ಕಿಟ್ ವಿತರಣೆ ಕಾರ್ಯಕ್ರಮವನ್ನು ದಿನಾಂಕ 17.8.2026ರಂದು ಆಯೋಜಿಸಲಾಗಿತ್ತು.

ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಡಾ. ಜ್ಞಾನೇಶ್‌ರವರು, ಪೌಷ್ಟಿಕ ಭದ್ರತೆಗಾಗಿ ಮಹಿಳೆಯರು ಕೈ ತೋಟ ಮಾಡಿಕೊಳ್ಳುವುದು ಬಹಳ ಮುಖ್ಯ. ಹಾಗೆಯೇ ದಿನನಿತ್ಯದ ಆಹಾರದಲ್ಲಿ ತಾಜಾ ತರಕಾರಿಗಳ ಸೇವನೆ ಮಾಡುವುದರಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದೆಂದು ತಿಳಿಸಿದರು.

ಧಾನ್ ಫೌಂಡೇಶನ್ನಿನ, ನಂಜನಗೂಡಿನ ನಿರ್ದೇಶಕರಾದ ಶ್ರೀ ಪ್ರಕಾಶ್‌ರವರು ಮಾತನಾಡಿ, ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿವಿಧ ತರಬೇತಿಗಳನ್ನು ಆಯೋಜಿಲಾಗುತ್ತಿದ್ದು ರೈತರು ಹಾಗೂ ರೈತ ಮಹಿಳೆಯರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಮತ್ತೋರ್ವ ಮುಖ್ಯ ಅತಿಥಿಗಳಾದ ಶ್ರೀಮತಿ ದಮಯಂತಿಯವರು ಪೌಷ್ಟಿಕ ಕೈತೋಟ ಮಾಡುವುದರಿಂದ ಹಾಗೂ ಕೈತೋಟದಲ್ಲಿ ಕೀಟನಾಶಕಗಳ ಬಳಕೆ ಮಾಡದಿರುವುದರಿಂದ ವಿಷಮುಕ್ತ ತರಕಾರಿಗಳನ್ನು ಸೇವಿಸಲು ಸಾಧ್ಯವೆಂದು ತಿಳಿಸಿದರು.

ಕೆವಿಕೆಯ ತೋಟಗಾರಿಕೆ ವಿಜ್ಞಾನಿಯಾದ ಡಾ. ಜಿ.ಎಂ. ವಿನಯ್‌ರವರು ಪೌಷ್ಟಿಕ ಕೈ ತೋಟದ ರಚನೆ ಮತ್ತು ನಿರ್ವಹಣೆ, ಕೈತೋಟದಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ, ಭೂಮಿ ಸಿದ್ಧತೆ, ಬಿತ್ತನೆ ಬಗ್ಗೆ ಸಮಗ್ರ ಮಾಹಿತಿ ನೀಡಿದರು. ಸಸ್ಯ ಸಂರಕ್ಷಣೆ ವಿಜ್ಞಾನಿಯಾದ ಡಾ. ವೈ. ಪಿ. ಪ್ರಸಾದ್‌ರವರು ಕೈತೋಟದಲ್ಲಿ ಬರುವ ಕೀಟ ಮತ್ತು ರೋಗಗಳ ಸಾವಯುವ ನಿರ್ವಹಣಾ ಕ್ರಮಗಳು ಕೈತೋಟದಲ್ಲಿ ಅನುಸರಿಸಬೇಕಾದ ಮುಲಭೂತ ಕ್ರಮಗಳಾದ ಪಂಚಗವ್ಯ ಹಾಗೂ ತಿಪ್ಪೆ ಗೊಬ್ಬರದ ಬಳಕೆ, ಅಡುಗೆ ಮನೆಯ ತ್ಯಾಜ್ಯದ ಸದ್ಬಳಕೆಯ ಕುರಿತು ಅರಿವು ಮೂಡಿಸಿದರು. ಶ್ರೀಮತಿ ಎಚ್.ವಿ. ದಿವ್ಯಾರವರು ನಗರಗಳಲ್ಲಿ ಟೆರಸ್ ಗಾರ್ಡನ್ ಹಾಗೂ ಅದರ ಪ್ರಾಮುಖ್ಯತೆ ಮತ್ತು ನಿರ್ವಹಣೆ ಕುರಿತು ಮಾತನಾಡಿದರು.

ಗೃಹ ವಿಜ್ಞಾನದ ವಿಜ್ಞಾನಿಯಾದ ಡಾ. ದೀಪಕರವರು ಪೌಷ್ಟಿಕ ಕೈ ತೋಟದಲ್ಲಿ ಬೆಳೆದ ತರಕಾರಿಗಳ ಪೌಷ್ಟಿಕ ಮಹತ್ವ ಹಾಗೂ ದಿನನಿತ್ಯದ ಆಹಾರದಲ್ಲಿ ವಿವಿಧ ತರಕಾರಿ ಬಳಕೆ ಮಾಡಿ ಉತ್ತಮ ಜೀವನ ಶೈಲಿಯಿಂದ ರೋಗಗಳನ್ನು ನಿವಾರಿಸಿಕೊಳ್ಳಬಹುದು. ಪೌಷ್ಟಿಕ ಹಾಗೂ ಸಮತೋಲನ ಆಹಾರ ಬಹಳ ಮುಖ್ಯ. ಬೇರೆ ಆಹಾರ ಪದಾರ್ಥಗಳಿಗೆ ಹೋಲಿಸಿದಾಗ ತರಕಾರಿಗಳಲ್ಲಿ ಅಧಿಕ ಪ್ರಮಾಣದ ಜೀವಸತ್ವಗಳು, ಖನಿಜಲವಣಗಳು, ನಾರಿನಾಂಶ ಇದೆ. ಇವುಗಳ ಸೇವನೆಯಿಂದ ಸೂಕ್ಷ್ಮ ಪೋಷಕಾಂಶಗಳ ಕೊರತೆಯನ್ನು ನೀಗಿಸಬಹುದು ಹಾಗೂ ರಾಸಾಯನಿಕ ಮುಕ್ತ ತರಕಾರಿಗಳ ಸೇವನೆಯಿಂದ ಆರೋಗ್ಯವನ್ನು ವೃದ್ಧಿಸಿಕೊಳ್ಳಬಹುದು ಎಂದು ತಿಳಿಸಿದರು.

ಡಾ. ದೀಪಕ್ ಸ್ವಾಗತಿಸಿದರು. ಶ್ರೀಮತಿ ಹೆಚ್.ವಿ. ದಿವ್ಯಾ ನಿರೂಪಿಸಿದರು ಡಾ. ಯು.ಎಂ. ರಕ್ಷಿತ್ ರಾಜ್ ವಂದಿಸಿದರು. ಕಾರ್ಯಕ್ರಮದಲ್ಲಿ 60ಕ್ಕೂ ಹೆಚ್ಚು ರೈತ ಮಹಿಳೆಯರು ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ರೈತರಿಗೆ ಪೌಷ್ಟಿಕ ಕೈತೋಟದ ಕಿಟ್ ಹಾಗೂ ಸಸಿಗಳನ್ನು ವಿತರಿಸಲಾಯಿತು.

## ಶ್ರೀಮಠ ಮತ್ತು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆ

## ಸ್ವಾತಂತ್ರ್ಯ ಹೋರಾಟಗಾರರ ಬಲಿದಾನ ಸದಾ ಸ್ಮರಣೀಯ




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯಂದು ಶ್ರೀ ಎಸ್. ತಳಿಕೇರಪ್ಪನವರು ಧ್ವಜಾರೋಹಣವನ್ನು ನೆರವೇರಿಸಿದರು.

ದೇಶದ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ-ಬಲಿದಾನಗಳನ್ನು ಸದಾ ಸ್ಮರಿಸುತ್ತಿರಬೇಕು ಎಂದು ರಿಸರ್ವ್ ಬ್ಯಾಂಕ್ ನೋಟು ಪೇಪರ್ ಮಿಲ್‌ನ ನಿವೃತ್ತ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ತಳಿಕೇರಪ್ಪನವರು ಹೇಳಿದರು.

ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 15.8.2026ರಂದು ನಡೆದ 80ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣವನ್ನು ನೆರವೇರಿಸಿ ಅವರು ಮಾತನಾಡಿದರು. ಇದು ದೇಶದ ಇತಿಹಾಸದಲ್ಲಿ ಅತ್ಯಂತ ಪವಿತ್ರವಾದ ದಿನ. ಅಸಂಖ್ಯಾತ ಸತ್ಯಾಗ್ರಹಿಗಳ ಹೋರಾಟದ ಫಲವಾಗಿ ದೇಶ ಸ್ವಾತಂತ್ರ್ಯವನ್ನು ಗಳಿಸಿತು. ಸ್ವಾತಂತ್ರ್ಯವನ್ನು ಗಳಿಸಿದ ಮೇಲೆ ನಾವು ದೇಶವನ್ನು ಎಷ್ಟು ಉತ್ತಮಗೊಳಿಸಿದ್ದೇವೆ ಎಂಬುದು ಮುಖ್ಯವಾಗುತ್ತದೆ. ಅದನ್ನು ಸಾರ್ಥಕಗೊಳಿಸುವ ಜವಾಬ್ದಾರಿ ಎಲ್ಲರ ಮೇಲಿದೆ. ಜ್ಞಾನ, ಶಿಕ್ಷಣ, ಸೇವೆ, ಆರೋಗ್ಯ, ಸಂಸ್ಕೃತಿ ಮತ್ತು ಗ್ರಾಮೀಣಾಭಿವೃದ್ಧಿಗಳಂತಹ ಸ್ವಾತಂತ್ರ್ಯದ ಧ್ಯೇಯೋದ್ದೇಶಗಳನ್ನು ಅಂದಿನಿಂದಲೂ ಸುತ್ತೂರು ಶ್ರೀಮಠ ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯ. ಮನುಷ್ಯ ಕಲ್ಯಾಣವೇ ಸಮಾಜದ ಕಲ್ಯಾಣ, ಸಮಾಜದ ಕಲ್ಯಾಣವೇ ರಾಷ್ಟ್ರದ ಕಲ್ಯಾಣ ಎಂಬ ಆಶಯವನ್ನು ಶ್ರೀಮಠ ಹೊಂದಿದೆ. ತ್ರಿವಿಧ ದಾಸೋಹಗಳ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ಮಹತ್ತರ ಹೆಜ್ಜೆಯನ್ನಿಟ್ಟಿದೆ ಎಂದು ಹೇಳಿದರು.

ಶ್ರೀ ಜಯರಾಜೇಂದ್ರರು, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಶಿವಕುಮಾರಸ್ವಾಮಿ, ಶ್ರೀ ಅಕ್ಷಯ್ ಮಲ್ಲಪ್ಪ, ಡಾ. ದೇವಿಕಾ ಗುಣಶೀಲಾ, ಡಾ. ರಾಜಶೇಖರ್ ನಾಯಕ್, ಶ್ರೀ ವಿನಯ್ ಗುರುಕಾರ್, ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿ ಮೊದಲಾದವರು ಉಪಸ್ಥಿತರಿದ್ದರು. ಶ್ರೀಮಠದ ಗುರುಕುಲ ಸಾಧಕರು, ಸೇವಾ ಸಿಬ್ಬಂದಿವರ್ಗದವರು, ಆರಕ್ಷಕ ಸಿಬ್ಬಂದಿಗಳು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ಶ್ರೀಮತಿ ರೂಪ ಗುರುಪ್ರಸಾದ್ ಮತ್ತು ಶ್ರೀಮತಿ ವಿನುತ ದೇಶಭಕ್ತಿಗೀತೆಗಳನ್ನು ಪ್ರಸ್ತುತಿಪಡಿಸಿದರು. ಶ್ರೀ ಎಸ್. ನಂದೀಶ್ ಸ್ವಾಗತಿಸಿದರು. ಕರೋಹಟ್ಟಿಯ ಶ್ರೀ ಬಸವಲಿಂಗ ದೇಶಿಕೇಂದ್ರ ಸ್ವಾಮಿಗಳು ವಂದಿಸಿದರು. ಶ್ರೀ ಕುಮಾರಸ್ವಾಮಿ ವಿರಕ್ತಮಠ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ




ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 15.08.2026ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಧ್ವಜಾರೋಹಣ ಮಾಡಿದ ಸಂಸ್ಕೃತಿ ಚಿಂತಕ ಮತ್ತು ನಿವೃತ್ತ ಶಿಕ್ಷಕರಾದ ಶ್ರೀ ಶಿವಣ್ಣ ಇಂದ್ವಾಡಿಯವರು ಮಾತನಾಡಿ, ಸ್ವಾತಂತ್ರ್ಯ ದಿನಾಚರಣೆಯು ಸಂಭ್ರಮದ ಸುದಿನ. ನಮ್ಮ ದೇಶದ ಬಗ್ಗೆ ಇರುವ ಜವಾಬ್ದಾರಿಯನ್ನು, ಗೌರವವನ್ನು ನೆನಪಿಸುವಂತಹ ದಿನವಾಗಿದೆ. ಹಾಗೆಯೇ ನಮ್ಮ ದೇಶದ ಕಾನೂನುಗಳನ್ನು ಪಾಲಿಸಬೇಕು, ಪರಿಸರವನ್ನು ಸ್ವಚ್ಛವಾಗಿಡಬೇಕು. ಇತರರಿಗೆ ಸಹಾಯ ಮಾಡುವುದರ ಜೊತೆಗೆ ದೇಶಾಭಿಮಾನವನ್ನು ಬೆಳಸಿಕೊಂಡು ಸದೃಢ ರಾಷ್ಟ್ರ ನಿರ್ಮಾಣ ಮಾಡಲು ಶ್ರಮಿಸಬೇಕೆಂದು ಹೇಳಿದರು.

ಪ್ರಾಂಶುಪಾಲರಾದ ಡಾ. ಹೆಚ್.ಎಸ್. ಕೊಂಗಳಪ್ಪ, ಜೆಎಸ್‌ಎಸ್ ಬಾಲಕಿಯರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎನ್. ಮಹಾದೇವಸ್ವಾಮಿ, ಸ್ಕೂಲ್ ಆಫ್ ನರ್ಸಿಂಗ್ ಪ್ರಾಂಶುಪಾಲರಾದ ಶ್ರೀ ಹೇಮೇಶ್‌ಮೂರ್ತಿ, ರಾಷ್ಟ್ರೀಯ ಹಬ್ಬಗಳ ಸಂಚಾಲಕರಾದ ಶ್ರೀ ಕೆ.ಆರ್ ಗುರುಪ್ರಸಾದ್, ದೈಹಿಕ ನಿರ್ದೇಶಕರಾದ ಶ್ರೀ ಎಸ್. ಶ್ರೀಧರ್, ಅಧ್ಯಾಪಕರು, ಅಧ್ಯಾಪಕೇತರರು, ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು

ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ಸಮುಚ್ಚಯದಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.

ಮೈಸೂರಿನ ನಿವೃತ್ತ ಉಪ ಪೊಲೀಸ್ ಆಯುಕ್ತರಾದ ಶ್ರೀ ಶಿವರಾಜುರವರು ಧ್ವಜಾರೋಹಣ ನೆರವೇರಿಸಿ ಮಾತನಾಡುತ್ತಾ, ಸ್ವಾತಂತ್ರ್ಯ ಹೋರಾಟಗಾರರು ತ್ಯಾಗ, ಬಲಿದಾನದ ಮೂಲಕ ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ. ಅಂತಹ ಮಹನೀಯರ ಆದರ್ಶಗಳನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ದೇಶದ ಪ್ರಗತಿಯು ಇಂದು ವಿದ್ಯಾರ್ಥಿಗಳ ಹಾಗೂ ಯುವಕರ ಮೇಲಿದೆ. ಸುತ್ತೂರು ಶಾಲೆಯು ಜಾತ್ಯತೀತ ಮನೋಭಾವ ಇಟ್ಟುಕೊಂಡು ದೇಶದ



ಎಲ್ಲಾ ಪ್ರಾಂತ್ಯಗಳ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವುದು ಸ್ವಾತಂತ್ರ್ಯ ಪಡೆದ ಧ್ಯೇಯಕ್ಕನುಗುಣವಾಗಿದೆ. ಇಂದು ದೇಶದ ಅಭಿವೃದ್ಧಿಗೆ ಯುವಶಕ್ತಿಯ ಅವಶ್ಯಕತೆ ಇದೆ. ವೈಜ್ಞಾನಿಕ, ತಾಂತ್ರಿಕ ಶಿಕ್ಷಣವು ಪ್ರತಿಯೊಬ್ಬರಿಗೂ ದೊರೆತಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಇಂದೋರ್‌ನ ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಟ್ರಸ್ಟಿಗಳು ಹಾಗೂ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಜಿ.ಬಿ. ಶಿವರಾಜುರವರು ಮಾತನಾಡುತ್ತಾ, ಭಾರತೀಯರಲ್ಲಿರುವ ಜ್ಞಾನ, ಸಂಸ್ಕಾರ, ನೈತಿಕತೆ ಜಗತ್ತಿನಲ್ಲಿ ಎಲ್ಲೂ ಇಲ್ಲ. ಅಮೆರಿಕಾದ ಅಧ್ಯಕ್ಷರಾಗಿದ್ದ ಜಾನ್ ಎಫ್ ಕೆನಡಿ ಹೇಳುವಂತೆ ನಾವು ಯುದ್ಧವನ್ನು ನಿಲ್ಲಸದೇ ಹೋದರೆ ಅದು ಮುಂದೆ ಮನುಕುಲವನ್ನೇ ನಾಶ ಮಾಡುತ್ತದೆ. ಸ್ವಾತಂತ್ರ್ಯವೆಂಬುದು ಸ್ವೇಚ್ಛಾಚಾರವಲ್ಲ ಎಂಬುದನ್ನು ಅರಿತು ಇಂದಿನ ಯುವಕರು ಪ್ರಾಮಾಣಿಕ ಹಾಗೂ ದಕ್ಷತೆಯಿಂದ ದೇಶವನ್ನು ಕಟ್ಟಬೇಕು. ಇಂದು ನಾವು ಹಿರಿಯರನ್ನು ಸ್ಮರಿಸದೇ ಹೋದರೆ ಮುಂದಿನ ಮಕ್ಕಳ ಭವಿಷ್ಯ ಕಟ್ಟುವುದು ಕಷ್ಟವಾಗುತ್ತದೆ. ಸತ್ಯವನ್ನು ಬಲಿಕೊಟ್ಟು ಸ್ವಾತಂತ್ರ್ಯ ಪಡೆಯುವುದಾದರೆ ಅದು ಸ್ವಾತಂತ್ರ್ಯವಲ್ಲ ಅದು ದೇಶವನ್ನು ನಾಶ ಮಾಡಿದಂತೆ ಎಂಬ ಗಾಂಧೀಜಿಯವರ ಮಾತನ್ನು ಪ್ರತಿಯೊಬ್ಬರು ಅರಿತು ಮಕ್ಕಳನ್ನು ಸಂಸ್ಕಾರಯುತರನ್ನಾಗಿ ಬೆಳೆಸಬೇಕಾಗಿದೆ. ತಮ್ಮ ಉಸಿರನ್ನೇ ತಮಗಾಗಿ ಬಳಸಿಕೊಳ್ಳದ ವ್ಯಕ್ತಿಗಳು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಜಗತ್ತಿನ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಇರುವುದು ಭಾರತೀಯ ಮಾರ್ಗವಾದ ಗಾಂಧಿ ಮಾರ್ಗದಿಂದ ಮಾತ್ರ ಎಂಬ ಅರ್ನಾಲ್ಡ್‌ರವರ ಮಾತನ್ನು ನಾವು ನೆನೆಯಬೇಕು ಎಂದರು.

ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಸಹಾಯಕ ಆಡಳಿತಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು ಮಾತನಾಡಿ, ಇಂದಿನ ಯುವಕರು ಶಿಕ್ಷಣವಂತರಾಗುತ್ತಿದ್ದಾರೆ ಆದರೆ ಪ್ರಜ್ಞಾವಂತರಾಗುತ್ತಿಲ್ಲ. ದೇಶಪ್ರೇಮದ ಕೊರತೆ ಎದ್ದು ಕಾಣುತ್ತಿದೆ. ಸ್ವದೇಶಿ ಉತ್ಪನ್ನಗಳನ್ನು ಪ್ರೋತ್ಸಾಹಿಸಿ, ಸ್ವಚ್ಛತೆಗೆ ಆದ್ಯತೆ ನೀಡಿ, ಮೈಮನಗಳ ಶುದ್ಧಿಯಾಗಬೇಕು. ಇಂದಿನ ಯುವಕರು ಮೌಲ್ಯಯುತವಾದ ಸಂಸ್ಕೃತಿಯನ್ನು ಕಳೆದುಕೊಳ್ಳದೆ ಉಳಿಸಿ ಬೆಳೆಸಿಕೊಳ್ಳಬೇಕಾಗಿದೆ. ಭಾರತವು ವೈವಿಧ್ಯಮಯ ದೇಶವಾದರೂ ಏಕತೆಯನ್ನು ಸಾಧಿಸಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ನುಡಿದರು.

ಶ್ರೀ ವೀರಭದ್ರಯ್ಯ, ಶ್ರೀ ಎಂ. ರಾಜಶೇಖರಮೂರ್ತಿ, ಶ್ರೀ ಜಿ. ಶಿವಮಲ್ಲು, ಶ್ರೀ ಎಂ.ಜಿ. ಬಸವಣ್ಣ, ಶ್ರೀ ಜಿ.ಎಂ.

ಷಡಕ್ಷರಿ, ಶ್ರೀ ಜಿ. ಶಿವಸ್ವಾಮಿ, ಶ್ರೀ ಮಹದೇವಪ್ರಸಾದ್, ಶ್ರೀಮತಿ ಸುಶೀಲಾ ಮುಂತಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಮಹತ್ವದ ಬಗ್ಗೆ ಕನ್ನಡ, ಇಂಗ್ಲಿಷ್, ಹಿಂದಿ ಭಾಷೆಗಳಲ್ಲಿ ವಿದ್ಯಾರ್ಥಿಗಳು ಭಾಷಣ ಮಾಡಿದರು. ಶಾಲೆಯ ಎನ್‌ಸಿಸಿ ವಾಯುದಳ, ಭೂದಳ, ಸ್ಕೌಟ್ ಮತ್ತು ಗೈಡ್ಸ್, ಬ್ಯಾಂಡ್ ತಂಡಗಳು ಆಕರ್ಷಕ ಪಥ ಸಂಚಲನ ನಡೆಸಿ, ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಮಲ್ಲಕಂಬ ಪ್ರದರ್ಶನ ನಡೆಯಿತು.

ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀಮತಿ ಕೆ.ಎಸ್. ಮಮತರವರು ಸ್ವಾಗತಿಸಿದರು. ಶ್ರೀಮತಿ ವಿದ್ಯಾಂಭ ವಂದಿಸಿದರು. ಶ್ರೀಮತಿ ಕೆ.ಎಂ. ಬಿಂದುರವರು ನಿರೂಪಿಸಿದರು.

## ಜೆಎಸ್‌ಎಸ್ ಕಾಲೇಜು, ಊಟಿ ರಸ್ತೆ, ಮೈಸೂರು



ಭಾರತದ ಸಂವಿಧಾನ ಶ್ರೇಷ್ಠವಾದ ಸಂವಿಧಾನವಾಗಿದೆ. ಅದರ ರಚನೆಯ ಹಿಂದೆ ಹಲವರ ಪರಿಶ್ರಮವಿದೆ. ವಿದ್ಯಾರ್ಥಿಗಳು ಇಂದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅರಿವು ಮತ್ತು ಭಾಗವಹಿಸುವಿಕೆ ಬಹಳ ಮುಖ್ಯ. ಪ್ರತಿಯೊಂದು ವಿಚಾರದ ಬಗ್ಗೆ ಅರಿವು ಇರಬೇಕು. ಹಾಗೂ ಭಾಗವಹಿಸುವಿಕೆಯ ಗುಣವನ್ನು ಬೆಳೆಸಿಕೊಳ್ಳಬೇಕು. ನಿಜವಾದ ಸ್ವಾತಂತ್ರ್ಯವೆಂದರೆ ಪ್ರಜಾಪ್ರಭುತ್ವವನ್ನು ಚೆನ್ನಾಗಿ ಅರಿಯುವುದು ಮತ್ತು ಅದರಲ್ಲಿ ಭಾಗವಹಿಸುವುದು. ಇದರಿಂದ ಪ್ರಶ್ನಿಸುವ ಹಕ್ಕು, ಮತಚಲಾಯಿಸುವ ಹಕ್ಕು, ಸಮಾನತೆಯ ಹಕ್ಕು ಸಾಧಿಸಬಹುದು ಹಾಗೂ ಸಮಕಾಲೀನ ವಾಸ್ತವತೆಯ ಅರಿವು ಸಾಧ್ಯವಾಗುತ್ತದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಕೇಂದ್ರದ ಡೀನ್ ಡಾ. ಎನ್. ಆನಂದ್‌ಗೌಡರವರು ಹೇಳಿದರು.

ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ 80ನೇ ಸ್ವಾತಂತ್ರ್ಯ ದಿನಾಚರಣೆಯ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು. ಸ್ವಾತಂತ್ರ್ಯ ದಿನಾಚರಣೆ ಕೇವಲ ರಾಷ್ಟ್ರೀಯ ಹಬ್ಬಗಳ ಆಚರಣೆಗೆ ಸೀಮಿತವಾಗಬಾರದು. ರಾಷ್ಟ್ರೀಯತೆ ಮತ್ತು ಸ್ವಾತಂತ್ರ್ಯದ ಪಯಣದ ನೆನಪು ಸದಾ ನಮಗೆ ಇರಬೇಕು. ಸ್ವಾತಂತ್ರ್ಯ ಹೋರಾಟದ ಪಯಣವನ್ನು ನೋಡಿದಾಗ, ಪರಿವರ್ತನೆಯು ಹಾದಿ ರೋಮಾಂಚನಕಾರಿಯಾಗಿದೆ. ಅಭಿವೃದ್ಧಿಶೀಲ ಭಾರತದ ಸರ್ವತೋಮುಖ ಬೆಳವಣಿಗೆಯ ಹಿಂದೆ ಸ್ವಾತಂತ್ರ್ಯ

ಹೋರಾಟದ ಬಲಿದಾನಗಳ ಅರಿವು ನಮಗೆ ಸದಾ ಇರಬೇಕು. ಭಾರತವು ಸಾವಿರಾರು ಭಾಷೆ, ನೂರಾರು ಸಂಸ್ಕೃತಿ, ಆಚಾರ ವಿಚಾರಗಳನ್ನು ಹೊಂದಿದ್ದರು, ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ಜಗತ್ತಿನ ಸರ್ವಶ್ರೇಷ್ಠ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ದೇಶದ ಜನಸಂಖ್ಯೆಯನ್ನು ಶಕ್ತಿಯಾಗಿ ನೋಡಬೇಕು. ಜಗತ್ತಿನ ರಾಷ್ಟ್ರಗಳಲ್ಲಿ ಅತಿ ಹೆಚ್ಚು ಯುವ ಶಕ್ತಿ ಸಂಪನ್ಮೂಲವನ್ನು ಹೊಂದಿರುವ ಬಲಿಷ್ಠ ರಾಷ್ಟ್ರ ಭಾರತವಾಗಿದೆ. ಇದನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ ರವರು ವಹಿಸಿ, ಧ್ವಜಾರೋಹಣವನ್ನು ನೆರವೇರಿಸಿದರು.

ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಹೆಚ್.ಪಿ. ಮಹದೇವಸ್ವಾಮಿ ಸ್ವಾಗತಿಸಿದರು. ಕ್ಯಾಪ್ಟನ್ ಡಾ. ಎಲ್. ವಿನಯ್‌ಕುಮಾರ್ ವಂದಿಸಿದರು. ಕು. ವಿ. ಪ್ರಿಯ ಮತ್ತು ಕು. ಸ್ಫೂರ್ತಿ ಕುಲಕರ್ಣಿ ಪ್ರಾರ್ಥಿಸಿದರು. ಡಾ. ಎಂ. ಸೌಮ್ಯ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಮೈಸೂರು




ಮೈಸೂರಿನ ಜೆಎಸ್ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಆವರಣದಲ್ಲಿ 80ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಜೆಎಸ್ಎಸ್ ಮಹಾವಿದ್ಯಾಪೀಠದ ಲೆಕ್ಕ ಮತ್ತು ಲೆಕ್ಕಪರಿಶೋಧನ ವಿಭಾಗದ ನಿರ್ದೇಶಕರಾದ ಶ್ರೀ ಕೆ.ಆರ್ ಸಂತಾನಂರವರು ಧ್ವಜಾರೋಹಣ ನೆರವೇರಿಸಿದರು. ಕುಲಪತಿಗಳಾದ ಡಾ. ಹೆಚ್. ಬಸವನಗೌಡಪ್ಪರವರು ಅಧ್ಯಕ್ಷತೆ ವಹಿಸಿದ್ದರು. ಕುಲಸಚಿವರಾದ ಡಾ. ಬಿ. ಮಂಜುನಾಥ, ಪರೀಕ್ಷಾಂಗ ನಿಯಂತ್ರಕರಾದ ಡಾ. ಸುಧೀಂದ್ರ ಭಟ್ ಮತ್ತು ಜೆಎಸ್ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ನಾರಾಯಣಪ್ಪನವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಜೆಎಸ್ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ಅಂಗ ಸಂಸ್ಥೆಗಳ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು, ಜೆಎಸ್ಎಸ್ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢಶಾಲೆಯ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಅಲ್ಲದೆ ಎನ್‌ಸಿಸಿ ತಂಡದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

## ನಿರಂತರ ಪರಿಶ್ರಮವೇ ಯಶಸ್ಸಿಗೆ ದಾರಿ




ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 27.8.2026ರಂದು ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ವತಿಯಿಂದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಘಟಕದ ಉದ್ಘಾಟನೆ ಹಾಗೂ ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆಯನ್ನು ಆಯೋಜಿಸಲಾಗಿತ್ತು.

ಕೊಳ್ಳೇಗಾಲ ತಹಶೀಲ್ದಾರರು ಹಾಗೂ ತಾಲ್ಲೂಕು ದಂಡಾಧಿಕಾರಿಗಳಾದ ಶ್ರೀ ಐ.ಇ. ಬಸವರಾಜುರವರು ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿ, ವಿದ್ಯಾರ್ಥಿಗಳು ಉನ್ನತ ವ್ಯಾಸಂಗದ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು. ನಿರಂತರ ಅಧ್ಯಯನ, ಸಮಯದ ಸದ್ಬಳಕೆ, ಸಾಮಾನ್ಯ ಜ್ಞಾನ, ಪ್ರಚಲಿತ ವಿದ್ಯಮಾನಗಳು ಹಾಗು ಸೂಕ್ತ ಮಾರ್ಗದರ್ಶನದಿಂದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಬಹುದು ಎಂದು ತಿಳಿಸಿದರು.

ಹುಲ್ಲಹಳ್ಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಗ್ರಂಥಪಾಲಕರಾದ ಡಾ. ಜಯಕುಮಾರ್‌ರವರು ಮಾತನಾಡಿ, ಭಾರತದ ಗ್ರಂಥಾಲಯ ವಿಜ್ಞಾನದ ಪಿತಾಮಹ ಎಂದು ಕರೆಯಲ್ಪಡುವ ಡಾ. ಎಸ್.ಆರ್ ರಂಗನಾಥನ್‌ರವರ ಜನ್ಮದಿನದ ನೆನಪಿಗಾಗಿ ಗ್ರಂಥಪಾಲಕರ ದಿನವನ್ನು ಆಚರಿಸಲಾಗುತ್ತದೆ. ಗ್ರಂಥಾಲಯುವು ಜ್ಞಾನದ ಭಂಡಾರವಾಗಿದ್ದು ವಿದ್ಯಾರ್ಥಿಗಳ ಶೈಕ್ಷಣಿಕ ಹಾಗು ವ್ಯಕ್ತಿತ್ವ ವಿಕಸನದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಪಠ್ಯಪುಸ್ತಕಗಳ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ ಪುಸ್ತಕಗಳನ್ನು ಓದುವ ಅಭ್ಯಾಸ ಬೆಳೆಸಿಕೊಳ್ಳಿ. ಗ್ರಂಥಾಲಯದಲ್ಲಿರುವ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಿ ಎಂದರು.

ಪ್ರಾಂಶುಪಾಲರಾದ ಡಾ. ಹೆಚ್.ಎಸ್. ಕೊಂಗಳಪ್ಪನವರು ಮಾತನಾಡಿ, ಪುಸ್ತಕಗಳು ಉತ್ತಮ ಸ್ನೇಹಿತರಿದ್ದಂತೆ. ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಜ್ಞಾನವೇ ಸಂಪತ್ತು. ಜ್ಞಾನವನ್ನು ಯಾರು ಕದಿಯಲು ಸಾಧ್ಯವಿಲ್ಲ. ನಾವು ಗಳಿಸುವ ಜ್ಞಾನವು ಸಮಾಜದ ಪ್ರಗತಿಗೆ ಪೂರಕವಾಗಿರಬೇಕು ಎಂದು ತಿಳಿಸಿದರು. ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಎಸ್. ಮಮತ ಮತ್ತು ಗ್ರಂಥಪಾಲಕರಾದ ಎಸ್. ಶ್ರೀ ಮಹದೇವಸ್ವಾಮಿ ಉಪಸ್ಥಿತರಿದ್ದರು.

## ಕಲೆ ಮತ್ತು ಸಂಸ್ಕೃತಿ ಮಾನವೀಯತೆಯ ಬೆನ್ನೆಲುಬು




ಮನುಷ್ಯನು ರೂಢಿಸಿಕೊಂಡು ಬಂದಿರುವ ಕಲೆ ಮತ್ತು ಸಂಸ್ಕೃತಿಯು ಅವನಲ್ಲಿರುವ ಅಹಂಕಾರವನ್ನು ನಿರಸನಗೊಳಿಸಿ, ವಿನಯ, ವಿವೇಕ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವ ಮೂಲಕ ಮನುಷ್ಯತ್ವದ ನೆಲೆಗೆ ಕೊಂಡೊಯ್ಯುತ್ತದೆ ಎಂದು ಪ್ರೊ. ಮೈಸೂರು ಕೃಷ್ಣಮೂರ್ತಿಯವರು ಅಭಿಪ್ರಾಯಪಟ್ಟರು.

ಚಾಮರಾಜನಗರದ ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 25.08.2026ರಂದು ಆಯೋಜಿಸಲಾಗಿದ್ದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕಲೆ, ಸಂಸ್ಕೃತಿ ಹಾಗೂ ಕ್ರೀಡೆಗಳನ್ನು ಸಂರಕ್ಷಿಸಿ, ಸಂವರ್ಧಿಸುವ ಉದ್ದೇಶದಿಂದ ಶಿಕ್ಷಣ ಸಂಸ್ಥೆಗಳಲ್ಲಿ ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. ಕಲೆ ಮತ್ತು ಸಂಸ್ಕೃತಿಯ ಆಚರಣೆಗಳು ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವುದರೊಂದಿಗೆ ಆತ್ಮವಿಶ್ವಾಸ, ಸೃಜನಶೀಲತೆ, ಶಿಸ್ತು, ವಿನಯ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುತ್ತವೆ. ವೃತ್ತಿಜೀವನದ ಯಶಸ್ಸಿನೊಂದಿಗೆ ಸಾರ್ಥಕ ಬದುಕಿಗೂ ಕಲೆ ಮತ್ತು ಸಂಸ್ಕೃತಿಯ ಅರಿವು ಅವಶ್ಯಕವಾದದ್ದು. ಅವು ವ್ಯಕ್ತಿಗೆ ಆತ್ಮಶಕ್ತಿಯನ್ನು ಹಾಗೂ ಜೀವನೋತ್ಸಾಹವನ್ನು ನೀಡುತ್ತವೆ. ಆಧುನಿಕ ತಂತ್ರಜ್ಞಾನ ಯುಗದಲ್ಲಿ ವಿಜ್ಞಾನವು ಮಾನವ ಜೀವನಕ್ಕೆ ಅಪಾರ ಕೊಡುಗೆಗಳನ್ನು ನೀಡಿದ್ದರೂ, ಮನುಷ್ಯನ ಉನ್ನತ ಜೀವನದ ಪರಿಪೂರ್ಣತೆಗೆ ಸಹಕಾರಿಯಾಗಿಲ್ಲ. ಕುವೆಂಪು ಅವರ ನುಡಿಯಂತೆ ನಿಜವಾದ ವಿದ್ಯೆಯು ವ್ಯಕ್ತಿಯಲ್ಲಿ ಅಹಂಕಾರವನ್ನು ಬೆಳೆಸದೆ ವಿನಯವನ್ನು ಬೆಳೆಸಬೇಕು. ಶಿಕ್ಷಣದ ಅಂತಿಮ ಗುರಿ ಜ್ಞಾನಾರ್ಜನೆಯಾದರೂ ಜ್ಞಾನವನ್ನು ಸರಿಯಾದ ರೀತಿಯಲ್ಲಿ ಬಳಸುವ ವಿವೇಕ ಅದಕ್ಕಿಂತಲೂ ಶ್ರೇಷ್ಠವಾದುದು.

'ಶರೀರಮಾದ್ಯಂ ಖಲುಧರ್ಮ ಸಾಧನಂ' ಎಂಬ ಸಂಸ್ಕೃತೋಕ್ತಿಯಂತೆ ಯಾವುದೇ ಸತ್ಕಾರ್ಯವನ್ನು ಮಾಡಲು ಆರೋಗ್ಯವಂತ ದೇಹವು ಮೂಲಾಧಾರವಾಗಿದೆ. ದೈಹಿಕ

ಆರೋಗ್ಯವನ್ನು ಕಾಪಾಡುವಲ್ಲಿ ಕ್ರೀಡೆಯ ಪಾತ್ರ ಅತ್ಯಂತ ಮಹತ್ವದ್ದು. ದೇಹವನ್ನು ಸದೃಢಗೊಳಿಸುವುದರ ಜೊತೆಗೆ ಶಿಸ್ತು, ಸಮಯ ಪಾಲನೆ, ಸಹನೆ, ಆತ್ಮವಿಶ್ವಾಸವನ್ನು ಬೆಳೆಸುತ್ತದೆ. ಆದುದರಿಂದ ವಿದ್ಯಾರ್ಥಿಗಳು ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಕಲೆ ಮನಸ್ಸನ್ನು ಅರಳಿಸಿದರೆ, ಸಂಸ್ಕೃತಿ ವ್ಯಕ್ತಿತ್ವವನ್ನು ರೂಪಿಸುತ್ತದೆ, ಕ್ರೀಡೆ ದೇಹವನ್ನು ಸದೃಢಗೊಳಿಸುತ್ತದೆ, ಶಿಕ್ಷಣವು ಜ್ಞಾನ ಮತ್ತು ವಿವೇಕವನ್ನು ನೀಡುತ್ತದೆ ಇವುಗಳ ಸಮನ್ವಯದಿಂದ ವಿದ್ಯಾರ್ಥಿಗಳ ಸರ್ವತೋಮುಖ ವ್ಯಕ್ತಿತ್ವ ವಿಕಸನಗೊಂಡು ಅವರು ಯಶಸ್ಸಿನ ಹಾದಿಯಲ್ಲಿ ಮುನ್ನಡೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಅಂತಾರಾಷ್ಟ್ರೀಯ ಖೋಖೋ ಆಟಗಾರ್ತಿ ಕು. ಮೋನಿಕರವರು ತಾನು ಅಂತಾರಾಷ್ಟ್ರೀಯ ಕ್ರೀಡಾಪಟುವಾಗಿ ಹೊರಹೊಮ್ಮಲು ನಿರಂತರ ಪರಿಶ್ರಮ, ತಂದೆ ತಾಯಿಯ ಪ್ರೋತ್ಸಾಹ ಹಾಗೂ ಗುರುಗಳ ಕಠಿಣ ತರಬೇತಿ ಸಹಕಾರಿಯಾಯಿತು. ಪ್ರಸ್ತುತ ದಿನಗಳಲ್ಲಿ ಪೋಷಕರು ತಮ್ಮ ಮಕ್ಕಳನ್ನು ಕ್ರೀಡಾ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಹೆಚ್ಚಿನ ಪ್ರೋತ್ಸಾಹ ನೀಡದಿರುವುದು ವಿಷಾದನೀಯ. ಇದರ ಪರಿಣಾಮವಾಗಿ ಒಲಂಪಿಕ್ಸ್‌ನಂತಹ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾರತೀಯರ ಭಾಗವಹಿಸುವಿಕೆ ನಿರೀಕ್ಷಿತ ಮಟ್ಟದಲ್ಲಿಲ್ಲ. ಆದರೆ ಕ್ರೀಡಾ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿದ್ದು ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಉದ್ಯೋಗಗಳಲ್ಲಿ ಶೇ 3 ರಷ್ಟು ಮೀಸಲಾತಿಯು ಇದೆ. ಆದ್ದರಿಂದ ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಈ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸುವುದರೊಂದಿಗೆ ರಾಜ್ಯ ಮತ್ತು ದೇಶದ ಕೀರ್ತಿಯನ್ನು ಹೆಚ್ಚಿಸುವ ಸಂಕಲ್ಪ ಹಾಗೂ ಉತ್ಸಾಹವನ್ನು ಬೆಳೆಸಿಕೊಳ್ಳಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಪ್ರಾಂಶುಪಾಲರಾದ ಡಾ. ಎಂ. ಪ್ರಭುರವರು ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆಗಳು ಶಿಕ್ಷಣದ ಅವಿಭಾಜ್ಯ ಅಂಗಗಳಾಗಿದ್ದು ವಿದ್ಯಾರ್ಥಿಗಳ ಆತ್ಮಶಕ್ತಿ, ಆತ್ಮವಿಶ್ವಾಸ ಹಾಗೂ ಸರ್ವತೋಮುಖ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ಸಂಸ್ಕೃತಿಯು ನಮ್ಮ ಆಚಾರ ವಿಚಾರ ಜೀವನ ಮೌಲ್ಯ ಮತ್ತು ಪರಂಪರೆಯ ಪ್ರತಿಬಿಂಬವಾಗಿದ್ದು ಕಲೆ, ಸಾಹಿತ್ಯ, ನಾಟಕ ಹಾಗೂ ಜಾನಪದದ ಮೂಲಕ ಅದರ ಅರಿವು ಮೂಡುತ್ತದೆ. ಗಾದೆಗಳು, ಸೋಬಾನೆ ಪದಗಳು ರಾಗಿ ಬೀಸುವ ಪದಗಳು ಮೊದಲಾದವು ನಮ್ಮ ಅಮೂಲ್ಯ ಜಾನಪದ ಸಂಪತ್ತಾಗಿದ್ದು, ಅವು ಜನಜೀವನದ ಅನುಭವದ ಆಧಾರದ ಮೇಲೆ ರೂಪುಗೊಂಡು ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ. ಇವು ಸಾರ್ವಕಾಲಿಕ ಪ್ರಸ್ತುತತೆಯನ್ನು ಪಡೆದಿರುತ್ತವೆ. ಆರೋಗ್ಯವಂತ ವ್ಯಕ್ತಿಯಿಂದಲೇ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ. ದೈಹಿಕ ಹಾಗೂ ಮಾನಸಿಕ ಸದೃಢತೆಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಅವಶ್ಯಕ. ವಿದ್ಯಾರ್ಥಿಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆಗೈಯಲು ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಿ ಉನ್ನತ ಸಾಧನೆಯ ಹಾದಿಯಲ್ಲಿ ಮುನ್ನಡೆಯಬೇಕು ಎಂದು ತಿಳಿಸಿದರು.

ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ದೇವರಾಜ ಮೂರ್ತಿ ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ಶ್ರೀಮತಿ ಜಮುನ, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎಸ್. ಉಮೇಶ್ ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಕು. ಜಿ. ಸೌಂದರ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕು. ತಸ್ಲಿಂ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಎನ್. ತ್ರಿವೇಣಿ ಸ್ವಾಗತಿಸಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಂ.ಎನ್. ಜಯಶೀಲ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕು. ಜಿ. ಸೌಂದರ್ಯ ವಂದಿಸಿದರು. ಕು. ಸಿಂಚನ ಕಾರ್ಯಕ್ರಮವನ್ನು ನಿರೂಪಿಸಿದರು.

# ಔಷಧಿಗಳ ಅತಿಯಾದ ಬಳಕೆ ಸಲ್ಲದು




ಔಷಧಿಗಳ ಅತಿಯಾದ ಬಳಕೆ ಸಲ್ಲದು ಎಂದು ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಸಿ.ಪಿ. ಮಧುರವರು ಹೇಳಿದರು.

ಜೆಎಸ್‌ಎಸ್ ಆಸ್ಪತ್ರೆಯ ಕ್ಲಿನಿಕಲ್ ಫಾರ್ಮಸಿ (ಡಿಪಾರ್ಟ್‌ಮೆಂಟ್ ಆಫ್ ಫಾರ್ಮಸಿ ಪ್ರಾಕ್ಟೀಸ್) ಮತ್ತು ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿ ವತಿಯಿಂದ ದಿನಾಂಕ 31.8.2026ರಂದು ಆಯೋಜಿಸಿದ್ದ ವಿಶ್ವ ಓವರ್‌ಡೋಸ್ ಜಾಗೃತಿ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು, ಔಷಧಿಗಳನ್ನು ಅಗತ್ಯಕ್ಕಿಂತ ಹೆಚ್ಚಾಗಿ ತೆಗೆದುಕೊಳ್ಳಬಾರದು. ಇದರಿಂದ ಅಂಗಾಂಗಗಳು ತೊಂದರೆಗೆ ಒಳಗಾಗುತ್ತವೆ ಹಾಗೂ ಅಡ್ಡಪರಿಣಾಮಗಳು ಉಂಟಾಗುತ್ತವೆ. ಹಾಗಾಗಿ ಸಾರ್ವಜನಿಕರಲ್ಲಿ ಇದರ ಬಗ್ಗೆ ಜಾಗೃತಿ ಮತ್ತು ತಿಳುವಳಿಕೆ ಅಗತ್ಯ ಎಂದು ಅಭಿಪ್ರಾಯಪಟ್ಟರು.

ಉಪನಿರ್ದೇಶಕರಾದ ಡಾ. ಸುಮನರವರು ಮಾತನಾಡಿ, ಔಷಧಿಗಳ ಅತಿಯಾದ ಸೇವನೆಯು ದೇಹದ ವಿವಿಧ ಅಂಗಗಳ ಮೇಲೆ ಪರಿಣಾಮ ಬೀರಬಹುದು. ಮೆದುಳು, ಕಿಡ್ನಿ ಹಾಗೂ ಎಲ್ಲಾ ಅಂಗಾಂಗಗಳು ಸಹ ತೊಂದರೆಗೆ ಒಳಗಾಗುತ್ತವೆ. ಆದ್ದರಿಂದ ವೈದ್ಯರ ಸಲಹೆ ಪಡೆದು ನಂತರ ಔಷಧಿಯನ್ನು ತೆಗೆದುಕೊಳ್ಳಬೇಕು ಎಂದರು.

ಕ್ಲಿನಿಕಲ್ ಫಾರ್ಮಸಿ ವಿಭಾಗದ ಮುಖ್ಯಸ್ಥರಾದ ಡಾ. ಶಿಲ್ಪಾ ಪಾಲಾಕ್ಷರವರು ಮಾತನಾಡಿ, ನಮ್ಮ ದೇಹಕ್ಕೆ ಎಷ್ಟು ಪ್ರಮಾಣದಲ್ಲಿ ಔಷಧಿ ಕೊಡಬೇಕು ಎಂಬುದು ವೈದ್ಯರಿಗೆ ತಿಳಿದಿರುತ್ತದೆ. ಆದ್ದರಿಂದ ವೈದ್ಯರ ಸಲಹೆ ಮುಖ್ಯ. ಔಷಧಿಯನ್ನು ಯಾವ ಸಮಯದಲ್ಲಿ ಯಾವ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಸಲಹೆ ಮತ್ತು ಮಾಹಿತಿಯು ಕ್ಲಿನಿಕಲ್ ಫಾರ್ಮಸಿ ವಿಭಾಗದಲ್ಲಿ ಲಭ್ಯವಿದ್ದು ಸಾರ್ವಜನಿಕರು ಇದರ ಉಪಯೋಗವನ್ನು ಪಡೆದುಕೊಳ್ಳಬಹುದು ಎಂದರು. ಓವರ್‌ಡೋಸ್ ಕಾರಣಗಳು, ಅಪಾಯಗಳು, ಪರಿಣಾಮಗಳು ಹಾಗೂ ತಡೆಗಟ್ಟುವ ಕ್ರಮಗಳ ಕುರಿತು ಸಮಗ್ರವಾಗಿ ವಿವರಿಸಿದರು.

ಕಾರ್ಯಕ್ರಮದಲ್ಲಿ ಕ್ಲಿನಿಕಲ್ ಫಾರ್ಮಸಿ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ. ರಮೇಶ್, ಜೆಎಸ್‌ಎಸ್ ಆಸ್ಪತ್ರೆಯ ಔಷಧ ಕೇಂದ್ರದ ಪ್ರಭಾರ ಅಧಿಕಾರಿಯಾದ ಡಾ. ಕೆ. ಮೃತ್ಯುಂಜಯ ಮತ್ತು ಆಸ್ಪತ್ರೆಯ ವೈದ್ಯರುಗಳು ಇತರೇ ಸಿಬ್ಬಂದಿವರ್ಗದವರು ಹಾಜರಿದ್ದರು.

## State Level Yogasana Championship

Department of Yoga, JSS Academy of Higher Education & Research, Mysuru, organized the 1st State Level Yogasana Championship-2026 on 23.8.202, at Sri Rajendra Auditorium, JSS Medical College, Mysuru.

The event was organized with an objective of promoting yoga as a discipline of physical fitness, mental wellbeing, concentration and overall personality development. It also featured the prestigious "Champion of Champions" recognition and awarding the titles "Mysuru Yogasana Shri" and "Yogasana Siri."

The inauguration was held on 23.8.2026. Dr. D Narayanappa, Principal, JSS Medical College, Mysuru, was the Chief Guest. The Guests of Honour included Dr. D.S. Bharathish, Chief Medical Officer, Government Nature Cure & Yoga Medical College & Hospital, Mysuru; Dr. S. Chandan, Deputy Dean (Research), JSS AHER; Dr. M.U. Sujan, Associate Professor & Coordinator, Department of Yoga, JSS AHER, and Ms. V.M. Jahnavi, Assistant Professor, Department of Yoga, JSS AHER; Sri K.G. Devaraju, Working President, Mysore Yoga Okkuta, Mysuru; Sri Rudresh, Sri Sanjay and other student volunteers from the Department were present.

The championship brought together yoga enthusiasts and participants in a vibrant presentation of yogasana, discipline and sporting excellence. The event provided a platform to demonstrate skill, balance, flexibility, strength, concentration and dedication to the yogic tradition.

The Valedictory Ceremony marked the culmination of the championship. Awards and certificates were distributed to all the participants and to the 52 winners who have won under various categories. The prestigious Champion of Champions titles were awarded as "Yogasana Shri" to Sri H.M. Thanush, for Men and "Yogasana Siri" to Ms. Vedika Manya Shivam for Women, along with cash prizes and trophies, recognizing their excellence in yogasana.

The Valedictory Ceremony was presided over by Sri S.R. Satish Chandra, Administrative Officer, JSS Medical College, and Sri Ramesh Kumar, President, Mysore Yoga Okkuta, Mysuru.

## World Hepatitis Day and SME Observed



In connection with the World Hepatitis Day 2026, guest lectures were arranged on 4.8.2026 by the Department of PG Studies in Kayachikitsa, JSS Ayurveda Medical and Hospital, Mysore.

Three eminent speakers delivered lectures on this occasion. The deliberations commenced with the Keynote Address by Dr. Ashok Kumar Panda, Research Officer, RARI, Ahmedabad, who took up the topic "Fatty liver : Can Ayurveda address an emerging health challenge?". His lecture highlighted the evolving lifestyle challenges faced by the people and emphasized the relevance of Ayurvedic treatment protocols in promoting healthy liver and its effective management. He explained the ongoing integrative research studies in the field of hepatology and portrayed significant interest for development of integrative liver care.

Another speaker, Dr. C.P. Archana, Professor, Department of Kayachikitsa, RAMC, Bengaluru, spoke on the topic "From classics to clinical practice : Understanding Formulations for Hepatitis." Her lecture provided detailed insights on the role of various Ayurveda formulations and therapeutic

protocols that help effective clinical practice.

Later, Dr. R. Devaraja, Consultant Medical Gastroenterologist, Narayana Multi speciality Hospital, Mysuru, delivered a lecture on "Viral Hepatitis : Lets break it down". His insightful lecture highlighted the clinical tips and lead points towards diagnosis, clinical decision-making and critical care in Viral Hepatitis. He also stressed upon the importance of Ayurveda and modern integration in treating hepatic disorders and was positively keen about such researches to happen in future.

The programme witnessed a positive response from the postgraduate and Final year BAMS students who got benefitted by these lectures. The students interacted with the guest speakers and received good clinical inputs.

The programme was formally inaugurated with an invocation. Dr. Sarbeswar Kar, Principal and Medical Superintendent, Dr. Deepa C. Patil, Professor & HOD, Department of PG Studies in Kayachikitsa, Dr. M.D. Beena, Dr. Subhash Chandra Bose, PG Co-ordinator, Dr.V.Shreeshananda Sharma, Professor, honourable guests and others were present at the function.

## Vignanotsava Exhibition

JSS Public School, HSR Layout, Bengaluru, organized Vignanotsava - Science and Art Integrated Exhibition on 1.8.2026, along with the Parent-Teacher Meeting.

The exhibition witnessed enthusiastic participation from students across Classes I to XI.

Students of Classes I to III displayed a wide range of artistic creations, including drawings, paintings, paper crafts, clay modelling, decorative art, and other creative projects. Their exhibits reflected originality, imagination, confidence and aesthetic appreciation, highlighting the importance of nurturing creativity from an early age.

Students of Classes IV to XI presented an impressive collection of working and static science models integrated with artistic elements. The exhibits covered concepts from Physics,




Chemistry, Biology, Environmental Science, Engineering, and Technology, enabling students to apply classroom learning to real-life situations. The exhibition encouraged scientific inquiry, innovation, critical thinking, and problem-solving while strengthening communication and presentation skills.

The objectives of the Exhibition were (i) Bringing the gap between theory and practical application; (ii) Fostering scientific temper and inquiry-based learning; (iii) Enhancing communication, collaboration, and presentation skills; and (iv) Build confidence through experiential and hands-on learning.

Parents, teachers and visitors highly appreciated the students' innovative ideas, creativity, and confidence. The event provided a valuable opportunity for students to interact with visitors, answer questions, and showcase their understanding of scientific concepts through experiential learning.

The parents highly appreciated the quality of exhibits, conceptual clarity, creativity and confident presentations. They expressed satisfaction with the school's emphasis on experiential learning and holistic development.

VIGNANOTSAVA, Science and Art Integrated Exhibition was a resounding success and a memorable learning experience for everyone involved.

## Independence Day

### JSS Public School, JSSTIs' Campus, Mysuru



The 80th Independence Day was celebrated with great patriotic fervour and enthusiasm at JSS Public School, JSSTIs' Campus, Mysuru, on 15.8.2026. The Chief Guest of the day was Dr. D.S. Guru, Senior Professor, Department of Studies in Computer Science, Universiry of Mysore.

The programme commenced with hoisting of the National Flag, followed by singing the National Anthem. The premises echoed a sense of patriotism and pride as students and teachers gathered to celebrate the occasion, which included patriotic songs, speeches and cultural performances by the students.

The Chief Guest addressed the gathering and advised the parents to guide their children in the right path. He also highlighted the sacrifices of our freedom fighters and reminded the audience about the values of freedom, unity, responsibility and national integrity.

Smt. K.B. Suma, Principal, spoke about the significance of Independence Day.

The students were encouraged to respect the values enshrined in the Constitution, perform their duties responsibly and contribute positively to the progress of the nation.

The celebration concluded with a pledge to uphold the dignity of the nation and to work towards building a united, responsible and progressive India.

## JSS Public School, J.P. Nagar, Mysuru



The 80th Independence Day was celebrated with great enthusiasm and patriotic spirit at JSS Public School, J.P. Nagar, on 15.8.2026.

The programme commenced with an invocation, followed by the flag hoisting ceremony. Sri Chetan Kumar, Chief Guest, along with Smt. S.N. Archana, Principal, hoisted the National Flag. The students sang the National Anthem and paid their tributes to the freedom fighters.

In his address, the Chief Guest recalled the sacrifices and contributions of the freedom fighters who fought for our independence. The students were encouraged to develop discipline, patriotism and a spirit of service and to become responsible citizens who contribute to the progress of the nation.

As part of the celebration, the school's Band Team presented an excellent performance, adding grandeur to the occasion. Ms. Kushala of Grade 9 entertained the audience with a beautiful instrumental music performance. The students of Grade 7 presented a patriotic song that touched everyone's hearts. The students of Grade 5 performed an attractive yoga dance and group dance. The students of Grade 6 presented an impressive physical exercise display, which was appreciated by all.

Ms. S. Aadya of Grade 10 spoke about the significance of Independence Day. Smt. S. Rajeshwari, Mathematics Teacher, delivered the welcome address. Sri Likhith of Grade 10 proposed vote of thanks. Sri M. Yashmith and Ms. Namratha of Grade 10 compered the programme.

## JSS Public School, Teachers' Layout, Mysore




The 80th Independence Day was celebrated 15.8.2026 with great enthusiasm and patriotic fervour at JSS Public School, Teachers' Layout, Mysuru.

The programme was graced by Sri Shankaregowda, Deputy Superintendent of Police, Mysuru, and Deputy Principal, Police Training School, who was the Chief Guest, who was warmly received by Smt. M. Asha, Principal, and Sri Santhosh Kumar, Physical Education Instructor.

The event began with a floral tribute to Bharat Matha and the freedom fighters, acknowledging the latter's sacrifice for the nation's independence. This was followed by a welcome address by Master S. Prathyush of Grade X. The Chief Guest was formally introduced by Master K. Vishnu Mahadev of Grade X.

The Chief Guest thereafter unfurled the National Flag, and, the gathering sang the National Anthem. He also inspected the parade and received the Guard of Honour.

The significance of Independence Day was eloquently highlighted by Master P.M. Madhav of Grade X and Master Vihal Jain of Grade VII through inspiring speeches respectively in English and Hindi. They paid heartfelt tribute to the sacrifices of the freedom fighters and reminded everyone of their responsibility to uphold the ideals of freedom, unity and national progress.

The cultural programme that

followed showcased the creativity, talent and patriotic spirit of the students. The audience was enthralled by melodious patriotic song presented by students of Grade VIII Colourful performances including patriotic dances, yoga demonstration, karate display, hoops, wand exercises, and an impressive fancy dress presentation portraying eminent national leaders and freedom fighters.

In his inspiring speech, the Chief Guest, paid rich tributes to the brave freedom fighters whose sacrifices secured India's independence. He reminded the students that history is shaped by individuals whose vision, dedication and actions bring about meaningful transformation. Encouraging the young minds to dream big, uphold moral values, and serve the nation with sincerity, he urged them to become responsible and disciplined citizens committed to building a stronger India.

Vote of Thanks was proposed by Master Puttu Madhe Gowda of Grade X.

## Sanskritotsava 2026

It is a matter of great pleasure that Sanskritotsava 2026 was organized by JSS Mahavidyapeetha, Mysuru, where the students of JSS Public School, JSS TIs' Campus, Mysore participated in the Inter-School and College Competition "Sa?sk?tena Vijñ?panam" (Sanskrit Advertisement) and was the First Prize.



## JSS Public School, Siddhartha Nagar, Mysore



The 80th Independence Day was celebrated at JSS Public School, Siddhartha Nagar, Mysuru, on 15.8.2026 with great zeal and patriotic fervour. Smt. B. Latha, Principal, and Sri S.L. Nagendra, Vice-Principal, escorted Sri. A.K. Rajesh, Deputy Superintendent of Police, who was the Chief Guest on the occasion.

The Principal welcomed the gathering. The Chief Guest unfurled the National Flag, which was followed by singing of the National Anthem and the Guard of Honour by the NCC cadets and Scouts and Guides troope.

Ms. N. Kushala of X Std. spoke on the significance of the day in English. There was a colourful and vibrant display of hoops and dumbbells. Ms. Gunithavya Patel of X Std. spoke in Kannada. Students presented a vibrant cultural programmes which included soul-stirring patriotic songs and a dance item representing the spirit of unity in diversity, followed by a wonderful yoga demonstration.

The Chief Guest delivered an inspiring speech, reminding everyone about the great sacrifices made by our freedom fighters and urging students to be responsible citizens. The programme concluded with a vote of thanks by Ms. Shreya of X Std. The programme was compered by Smt. B. Shashikala, English Teacher.

Before oldage deforms you
before death touches you
worship our Lord Kudala Sangama

**Basavanna**

## JSS Public School, Huvinahadagali



JSS Public School, Huvinahadagali, celebrated the 80th Independence Day of India on 15.8.2026 with great patriotic fervour and enthusiasm.

The programme began with an invocation by the School Choir, followed by offering floral tribute to the portraits of Mahatma Gandhi and Dr. B. R. Ambedkar.

The Chief Guest on the occasion, Sri K. Basavaraj, Retired CRPF Soldier, hoisted the National Flag, followed by the National Anthem. The March Past by all the four houses of the school was a major highlight of the celebration, reflecting discipline, confidence and team spirit.

Ms. Goutami Undadi of Grade X 'B' welcomed the gathering. Sri C. Kiranagouda of Grade IX 'B' spoke on "How India Got Its Independence", while students from other classes also participated enthusiastically.

Ms. K. Smitha of Grade X 'A' introduced the Chief Guest, who addressed the gathering and shared valuable thoughts on patriotism, sustainability, responsible citizenship, respect for the nation and India's progress. He encouraged the students to contribute positively to the development of the country.

In his Presidential Address, Sri N. Guruswamy conveyed Independence Day greeted the gathering and reminded the students of the great sacrifice of the freedom fighters.

The cultural programme featured a

patriotic dance by students of Grades VI, VII and VIII, paying tribute to the brave soldiers who laid their lives during the Kargil War. It was an expression of gratitude and respect towards the armed forces.

The programme concluded with Vote of Thanks by Ms. H.R. Harshitha of Grade X 'B'. The event was compered by Ms. Swarnagouri Akkasali and Ms. C.M. Inchara both of Grade X 'A'.

## SSX Symposium 2026 Held




The SSX Symposium 2026 on the theme "Innovations in Drug Metabolism and Pharmacokinetics: From Lab to Translation" was organized by the Department of Pharmaceutics at the Golden Jubilee Digital Theatre, JSS College of Pharmacy, Mysuru, on 7.8.2026. The event was held in the association with the Society for the Study of Xenobiotics (SSX), India. The one-day symposium brought together over 120 participants from academia,

research institutions and the pharmaceutical industries to explore emerging trends in DMPK, ADMET, bioanalysis, pharmacokinetic modelling, formulation and biopharmaceutics. The inaugural ceremony commenced with an invocation, followed by the welcome address by Dr. H.V. Gangadharappa, Head, Department of Pharmaceutics. The ceremonial of the lamp was performed in the presence of the dignitaries. Dr. Prashant M. Vishwanath, Dean (Research), JSS Academy of Higher Education & Research, Mysuru, graced the occasion as the Chief Guest, Dr. T.M. Pramod Kumar, Principal, JSS College of Pharmacy, Mysuru, presided as the Organizing Chairman. Dr. Anandi Karumbati, President, SSX-India and Team Lead, Centre for Chemical Biology and Therapeutics, inStem, introduced SSX India and outlined the objectives of the Symposium. The inaugural session concluded with vote of thanks delivered by Dr. K.M. Asha Spandana, Assistant Professor, Department of Pharmaceutics, JSS College of Pharmacy, Mysuru.

The symposium featured expert lectures on in vitro and in vivo DMPK, ADMET, bioanalysis, pharmacokinetic modelling, and formulation and biopharmaceutics strategies. A panel discussion provided an interactive forum for deliberations on contemporary challenges and translational opportunities in drug development.

The symposium concluded with the valedictory ceremony and networking session, successfully promoting scientific knowledge exchange, professional collaboration, and stronger academia-industry interaction in the fields of DMPK and pharmaceutical sciences.

As fire is in stone
as reflection in water
as the tree in the seed
as silence in sound,
you, Goheshwara, are in
your devotees

**Allama Prabhu**




ರಾಜೇಂದ್ರ ಶ್ರೀಗಳವರ 111ನೇ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಉತ್ತಮ ವಾರ್ಷಿಕ ಸಂಚಿಕೆಗಳಿಗೆ ಬಹುಮಾನ ವಿತರಿಸಲಾಯಿತು. ಅತಿಥಿಗಳು, ಸಂಸ್ಥೆಗಳ ಮುಖ್ಯಸ್ಥರು ಹಾಗೂ ಸಂಪಾದಕರುಗಳಿದ್ದಾರೆ. (29 ಆಗಸ್ಟ್ 2026)




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಡಾ. ಹರ್ಷ ಪ್ರಿಯಂವದಾರವರು ಉದ್ಘಾಟಿಸಿದರು. ಡಾ. ಕೆ. ಅನಂತರಾಮು, ಶ್ರೀಮತಿ ಎಂ.ಕೆ. ಸವಿತಾ, ಶ್ರೀ ಇಳೈ ಆಳ್ವಾರ್ ಸ್ವಾಮೀಜಿಯವರಿದ್ದಾರೆ. (13 ಆಗಸ್ಟ್ 2026)

**Registered with the Registrar of Newspapers for India No. KARBIL/2014/66470**
**'JSS Varthapathra' Monthly, Vol. 11, Issue No. 9, September 2026**



ಸುತ್ತೂರು ಶ್ರೀಕ್ಷೇತ್ರಕ್ಕೆ ಟಿವಿಎಸ್ ಮೋಟಾರ್ ಕಂಪನಿಯ ಗೌರವ ಅಧ್ಯಕ್ಷರಾದ ಶ್ರೀ ವೇಣು ಶ್ರೀನಿವಾಸನ್‌ರವರು ಆಗಮಿಸಿದ್ದಾಗ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದ ಸಂದರ್ಭದಲ್ಲಿ ಸಾಮೂಹಿಕ ಪ್ರಾರ್ಥನಾ ಸಭೆಯಲ್ಲಿ ಜೆಎಸ್‌ಎಸ್ ಉಚಿತ ವಸತಿ ಶಾಲೆಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. (20 ಆಗಸ್ಟ್ 2026)

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821–2548212 Extn. 49 e-mail: varthapathra@jssonline.org website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು
**ಬಿಡಿ ಪ್ರತಿ 10 ರೂ.**